without any power. So, even with regard to that, there is no substance in saying that the Government have no power to amend the rules that they have made. With regard to sections 40 and 12 A, no doubt there were a lot of difficulties experienced by the Sales Tax anthorities in computing the period of limitation, namely 5 years and in courts, it may drag on for 5 years or 7 years bacause now matters are being referred to the High Court. If all that period is not excluded, there will be no question of re-opening or reassessing and every body will get some advantage by gaining time. So, it is with that object that time is proposed to be excluded so that no person will have any chance of escaping reassessment. That is why this amendment of Section 40 and also of section 12 A with regard to escaped turnover is proposed to be made. That is absolutely necessary. So, Sir, there is absolutely no point in opposing the amendment of this nature which is quite necessary nor can we take it that we are going to annul the decision of the High Court. So, this amendment may be accepted by this House without any hesitation.

‡ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಮಾನ್ಯ ಅಧ್ಯಕ್ಷರೇ, ನಾನು ಈಗ 5 ವರ್ಷಗಳಿಂದ ಈ ಸಭೆಯಲ್ಲಿ ಆತುರ ಆತುರವಾಗಿ ಕಾನೂನು ಮಾಡಬೇಡಿ, ಆತುರ ಆತುರವಾಗಿ ಕಾನೂನು ಮಾಡುವುದರಿಂದ ಬರತಕ್ಕ ವ್ಯಾಧಿಗೆ ಪರಿಹಾರ ಕಷ್ಟವಾಗುತ್ತದೆ ಎಂದು ಅನೇಕ ಬಾರಿ ಆಳುವ ಪಕ್ಷಕ್ಕೆ ಹೇಳಿದ್ದೇನೆ. ಆದರೂ ಅವರು ನಾವು ಮಾಡಿದ್ದೇ ಸರಿಯೆಂದು ಮಾಡುತ್ತಾ ಹೊರಟಿದ್ದಾರೆ. ಹಿಂದೆ ಅಧಿಕಾರದಲ್ಲಿದ್ದಂಥಾ ನನ್ನ ಸ್ನೇಹಿತರಾದಂಥ ಶ್ರೀ ಶಂಸುದ್ದೀನ್ ಸಾಹೇಬರು ಈಗ ತಾನೆ ತಮ್ಮ ಸುದೀರ್ಘವಾದ ಭಾಷಣದಲ್ಲಿ ಹೇಳಿದರು. ಈ ಮಸೂದೆಯಲ್ಲಿರ ತಕ್ಕದ್ದು ಎಲ್ಲವೂ ಸರಿಯಾಗಿದೆ, ಎಲ್ಲೋ ಅಚಾತುರ್ಯವಾಗಿ ಪ್ರಮಾದವಶಾತ್ ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ ತಪ್ಪಾಗಿದೆ. ಅದಕ್ಕೋಸ್ಕರ ಯಾರೂ ಚಿಂತೆ ಮಾಡಬೇಕಾಗಿಲ್ಲ ಎಂದು. ಈ ದೇಶದಲ್ಲಿ ಸೆಕ್ಯೂರಿಟಿ ಇದೆಯೇ? ಈ ದೇಶದಲ್ಲಿ ನಾವು ಬದುಕುವುದಕ್ಕೆ ಮಾರ್ಗ ಇದೆಯೇ ಎಂದು ನನಗೆ ಭಯ ಬಂದಿದೆ. ಏತಕ್ಕೆಂದರೆ ತಾವು ಈ ಜಾಗಕ್ಕೆ ಬರುವುದಕ್ಕೆ ಮುಂಚೆ ನ್ಯಾಯಶಾಸ್ತ್ರವನ್ನು ಅಭ್ಯಾಸಮಾಡಿ ಈ ದೇಶದಲ್ಲಿ ಆಗತಕ್ಕ ಕಾನೂನುಗಳಲ್ಲಿ ಇರತಕ್ಕ ಲೋಪದೋಷಗಳನ್ನು ನ್ಯಾಯಾಲಯಗಳ ಮುಂದೆ ಎತ್ತಿ ಹಿಡಿದು ಲೆಜಿಸ್ಲೇಟರ್ಸ್ ಮಾಡಿರತಕ್ಕದ್ದು ಸರಿಯಲ್ಲ ಎಂದು ಹೇಳಿ ಜನಗಳಿಗೆ ತಾವು ಏನು ಪರಿಹಾರ ಕೊಡಿಸುತ್ತಿದ್ದಿರೋ ಅಂಥವರು ಇವೊತ್ತಿನ ದಿವಸ ಈ ಸ್ಥಳದಲ್ಲಿ ಬಂದು ಕುಳಿತಿದ್ದೀರಿ,

4-30 P.M.

ಇಲ್ಲಿ ನಡೆಯತಕ್ಕ ಎಲ್ಲ ಭಾಷಣಗಳ ವೈಖರಿಯನ್ನೂ ಕೇಳುತ್ತಿದ್ದೇನೆ. ಈಗ ತಂದಿರುವ ತಿದ್ದುಪಡಿ ಸರಿಯಿಲ್ಲವೆಂದು ಹೇಳುವುದಕ್ಕೆ ಮಾರ್ಗವಿಲ್ಲದಿದ್ದರೂ ನಿಮ್ಮ ಮನಸ್ಸಿನಲ್ಲಿ ಕಸಿವಿಸಿಯಾಗಿದೆ. ಕಾನೂನು ಕಟ್ಟಳೆ ಬೇಡವೇ, ಕೋರ್ಟ್ ಕಚೇರಿ ಬೇಡವೇ, ಈ ದೇಶದಲ್ಲಿ ಜನ ಬದುಕ ಬೇಡವೆ, ಎನ್ನುವ ಭಯ ಎಲ್ಲರಿಗೂ ಉತ್ಪನ್ನ ವಾಗುತ್ತದೆ. ಒಂದು ಕೋರ್ಟ್ ಒಂದು ತೀರ್ಮಾನವನ್ನು ಕೊಟ್ಟರೆ ಅದಕ್ಕೆ ವಿರೋಧವಾಗಿ ಒಂದು ತಿದ್ದುಪಡಿಯನ್ನು ತರುತ್ತೀರಿ. ಇವೊತ್ತು ಸೇಲ್ಸ್ ಟ್ಯಾಕ್ಸ್ ಆಯಿತು, ನಾಳೆ Agricultural Income-tax, ಮತ್ತೊಂದು ಮಗದೊಂದು ಬರುತ್ತದೆ. ಹೀಗೆ ನೀವು ಮಾಡತಕ್ಕ ತಪ್ಪುಗಳನ್ನು ಸರಿಮಾಡಲು ತಿದ್ದುಪಡಿಗಳನ್ನು ತರುತ್ತಿದ್ದೀರಿ. ಹೀಗೆ ನೀವು ಮಾಡಿದಂಥ ತಪ್ಪುಗಳಿಂದ ಕೂಡಿದ ಕಾನೂನುಗಳು ಶಾಸನ ಕಡತದಲ್ಲಿರುವುದಕ್ಕೆ ಲಾಯಕ್ಕಾಗಿಲ್ಲವೆಂದು ಈ ದೇಶದ ಕೋರ್ಟುಗಳಲ್ಲಿ, ಈ ದೇಶದ ಮುಖ್ಯ ನ್ಯಾಯಾಲಯದ ಮುಂದೆ ಕಾನೂನನ್ನು ಪ್ರಶ್ನೆ ಮಾಡಿ ನ್ಯಾಯವನ್ನು ಪಡೆದಿದ್ದರೆ, ನ್ಯಾಯಪಡೆದಿದ್ದು ಸರಿಯಲ್ಲವೆಂದು ಅವರ ಬಾಯಿಗೆ ಬೀಗ ಹಾಕುವುದಕ್ಕೆ ಹೋಗಿರತಕ್ಕ ವಾಮ ಮಾರ್ಗ ನಿಮ್ಮನ್ನು ಬಹಳ ದೂರ ಕೊಂಡೊಯ್ಯಲಾರದು.

ಹಿಂದೆ ಸೇಲ್ಸ್ ಟ್ಯಾಕ್ಸ್ ಬಿಲ್ ಬಂದು, ಸೆಲೆಕ್ಟ್ ಕಮಿಟಿಗೆ ಹೋದಾಗ, ಅದರ ಮೇಲೆ ಇಲ್ಲಿ ಚರ್ಚೆ ನಡೆದ ಕಾಲದಲ್ಲಿ ಆತುರಾತುರವಾಗಿ ಕಾನೂನು ಮಾಡಿ ಶಾಸನ ಕಡತಕ್ಕೆ ಏರಿಸಬೇಡಿ ಎಂದು ಈ ಸಭೆಯಲ್ಲಿ ಎಲ್ಲ ಪಕ್ಷದ ಜನರೂ ಒಂದೇ ಕೂಗಿನಿಂದ ಹೇಳಿದರು. ಆಹೊತ್ತಿನ ದಿವಸ, ಇನ್ನು ಈ ದೇಶದಲ್ಲಿ ಯಾರೂ ಇಲ್ಲವೇ ಇಲ್ಲ ಎಂದು ಪದೇ ಪದೇ ಅಧಿಕಾರ ಕೊಟ್ಟು, ಶಾಶ್ವತವಾಗಿ ಅವರ ಕೈಯಲ್ಲೇ ಇರಬೇಕು ಎಂದು ಹತ್ತು ವರ್ಷ ಕಾಲ ಯಾರ ಕೈಯಲ್ಲಿ ಈ ಖಾತೆಯನ್ನು ಕೊಟ್ಟಿದ್ದಿರೋ ಅಂಥ ಉದಾತ್ತವಾದ, ಅಂಥ ಬುದ್ಧಿವಂತರಾದ ಅಂಥ ಕೌಟಿಲ್ಯ ಶಾಸ್ತ್ರವನ್ನು ಅರೆದು ನುಂಗಿದಂಥ ಮಹನೀಯರು ಈ ಸೇಲ್ಸ್ ಟ್ಯಾಕ್ಸ್ ಬಿಲ್‌ನ್ನು ಈ ಸಭೆಯಲ್ಲಿ ಪಾಸ್ ಮಾಡಿಸಿ ಈ ದೇಶದ ಜನಗಳಿಗೆ ಕುತ್ತು ತಂದರು. ಆ ಹೊತ್ತು ಅವರಿಗೆ ಪರಿಜ್ಞಾನವಿರಲಿಲ್ಲವೇ, ಆಳುವ ಪಕ್ಷಕ್ಕೆ, ಕಾನೂನು ಮಾಡುವ ಜನಗಳಿಗೆ, ಅವರ ಕೈಯಲ್ಲಿರುವ permanent machineryಗೆ ಇಲ್ಲಿ ತಪ್ಪಿದೆ ತಪ್ಪಾಗುತ್ತದೆ, ಇದರಿಂದ ಮುಂದೆ ಜನಗಳಿಗೆ ತೊಂದರೆಯಾಗುತ್ತದೆ, ಕೋರ್ಟಿಗೆ ಹೋಗುತ್ತದೆಂದು ಹೇಳುವುದಕ್ಕೆ ಧೈರ್ಯವಿರಲಿಲ್ಲವೇ? ಆಹೊತ್ತಿನ ದಿವಸ ಎಲ್ಲರೂ ಬಾಯಿ ಮುಚ್ಚಿಸಿದರು, ಓಟಿಗೆ ಹಾಕಿದಾಗ ಎಲ್ಲ ಕೈಎತ್ತಿದರು. ಇವೊತ್ತಿನ ದಿವಸ ಹೈಕೋರ್ಟಿನ ಮುಂದೆ ಒಳ್ಳೆಯ ಕಾನೂನುವೇತ್ತರನ್ನು ಕರೆದುಕೊಂಡು ಹೋಗಿ ಇದು ಸರಿಯಾಗಿಲ್ಲ ಎನ್ನಿಸಕೊಂಡಿರಬೇಕಾದರೆ ನಮ್ಮ ಶ್ರೀಮಾನ್ ಕಂಠಿ ಸಾಹೇಬರು ತಮ್ಮ ಮುಖ್ಯ ಮಂತ್ರಿಗಳ ಅವಧಿಯಲ್ಲಿ ಜನಗಳಿಗೆ ಸಿಕ್ಕತಕ್ಕ ನೆರವನ್ನು ಕಿತ್ತು ಕೊಳ್ಳಬೇಕೆಂದು ಹೊರಟಿದ್ದಾರೆ. ಇದು ಯಾವ ನ್ಯಾಯ, ಸ್ವಾಮಿ? ಯಾರಿಗಾದರೂ ಹತ್ತು ವರ್ಷ ಶಿಕ್ಷೆಯಾಗಿದ್ದರೆ ನಿಮಗೆ ಬೇಕಾದವರಿಗಾದರೆ ಅದನ್ನು ಬೇಕಾದರೂ ತಪ್ಪಿಸುವ ಪ್ರಯತ್ನ ಮಾಡುತ್ತಿದ್ದೀರಿ. Death Sentence ಕೂಡ ಕಡಮೆ ಮಾಡಿಸಿದ್ದೀರಿ. ಶ್ರೀಮಾನ್ ಜತ್ತಿಯವರ ಅಧಿಕಾರದಲ್ಲಿ ಅದು ನಡೆದಿದೆ. ನಿಮ್ಮ ಕೈಯಲ್ಲಿ ಅಧಿಕಾರವಿದ್ದಿದ್ದರೆ Criminal Procedure Code, Civil Procedure Code ಇವುಗಳನ್ನು ತಿದ್ದುಪಡಿ ಮಾಡಿ ಏನೇನು ಅವಾಂತರ ಮಾಡುತ್ತಿದ್ದಿರೋ ಗೊತ್ತಿಲ್ಲ. ಏಕೆಂದರೆ ನೀವು ಈ ದೇಶಕ್ಕೆ ಅನ್ಯಾಯವಾಗತಕ್ಕ, ಕಾನೂನನ್ನು ತಿದ್ದು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಪಡಿಮಾಡತಕ್ಕ ಸೂಚನೆಯನ್ನು ಮಾಡಬಾರದು. ಇರುವ ಅಧಿಕಾರವನ್ನು ದುರುಪಯೋಗ ಮಾಡಿ ಕೊಳ್ಳುವ ಜನ ಒಳ್ಳೆಯದನ್ನು ಮಾಡುತ್ತಿಲ್ಲವೆನ್ನುವ ಭಯ ಬಂದಿದೆ. ಈ ದೇಶದಲ್ಲಿ ವ್ಯಾಪಾರ ಮಾಡಲು ಮದುವೆ ಮುಂಜಿ ಮಾಡಿಕೊಳ್ಳಲು ಆಸ್ತಿಪಾಸ್ತಿ ಮಾಡಿಕೊಳ್ಳಲು, ರಾಜಕೀಯ ಮಾಡಲು ಬಹಳ ಕಷ್ಟ ಬಂದಿದೆ. ಇದು ಸರಿಯಲ್ಲವೆಂದು ನಾನು ಹೇಳು ತ್ತಿದ್ದೇನೆ. ಬೀದಿಯಲ್ಲಿ ಓಡಾಡುವಾಗ ನಿಮಗೆ ಬೇಡ ವಾದವರಾದರೆ, ಅಂಥವರನ್ನು ಹಿಡಿದು ಒಳಗೆ ಹಾಕಿ ಎಂದರೆ ಏನುಮಾಡುವುದಕ್ಕಾಗುತ್ತದೆ? ಈ ರೀತಿ ಮಾಡುವುದು ನಿಮಗೆ ಲಾಯಖ್ಖಿಲ್ಲ. ತರವೂ ಅಲ್ಲ. ನಿಮಗೆ ಭೂಷಣವಲ್ಲವೆಂದು ಹೇಳುತ್ತಲೇ ಇದ್ದೇನೆ.

An HON'BLE MEMBER.—How is that relevant to the Bill before the House?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡೆ, ಈ ಮಸೂದೆಗೆ ಎರಡು ಗಂಟೆ ಸಾಲದು ಎಂದು. ಆಗ ಮಾನ್ಯ ಮುಖ್ಯ ಮಂತ್ರಿಗಳು ಎತ್ತಿದ ಕ್ರಿಯಾಲೋಪ ಸರಿ ಎಂದು ತಾವು ಹೇಳಿದಿರಿ. ಈ ಮಸೂದೆಯಲ್ಲಿರುವ ರೋಗರುಜಿನ ಗಳನ್ನು ತೊಡೆದು ಹಾಕಲು ಇದನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿ. ಇಲ್ಲದೇ ಹೋದರೆ ತಮ್ಮ ಅಧಿಕಾರ ವನ್ನು ಕಾನೂನು ಪ್ರಕಾರ ಉಪಯೋಗಿಸಿ ಒಂದು ಗಂಟೆಯಷ್ಟು ವೇಳೆ ಹೆಚ್ಚು ಮಾಡಿ ಎಂದು ಹೇಳುತ್ತೇನೆ. ಸ್ವಾಮಿ, ತಮ್ಮ ಗಂಟೆಯ ಶಬ್ದ ನನ್ನ ಕಿವಿಯಲ್ಲಿ ನಾದಮಾಡುತ್ತಿದೆ. ಕೊನೆಯ ಪಕ್ಷ 15 ನಿಮಿಷವಾ ದರೂ ನನಗೆ ಬೇಕು.

Mr. SPEAKER.—I will give your 15 minutes provided you speak to the point.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಯಾವುದಾ ದರೂ ಒಂದು ಕೇಸನ್ನು ಹಿಡಿದು ಕೋರ್ಟಿಗೆ ಹೋದರೆ ಅದನ್ನು ತಮ್ಮ ಕಡೆಗೆ ಎಳೆಯಲು ವಾದ ಮಾಡುವಂತೆ ನಾನು ಈ ವಿಷಯಗಳನ್ನೆಲ್ಲ ಹೇಳುತ್ತಿದ್ದೇನೆ.

ಒಂದೂವರೆ ಕೋಟಿ ರೂಪಾಯಿ ಹಣ ವಾಪಸು ಕೊಡಬೇಕಾಗುತ್ತದೆಂದು ಈ ತಿದ್ದುಪಡಿಯನ್ನು ತಂದಿದ್ದೀರಿ. ಈ ದೇಶದಲ್ಲಿರುವ highest tribunal ಒಂದು ತೀರ್ಪ ಕೊಟ್ಟಿದೆ. ಆ ತೀರ್ಪಿಗೆ ಗೌರವ ಕೊಟ್ಟು ಮುಂದೆ ಇಂಥಾದ್ದು ಆಗಬಾರದೆಂದುಮಾಡಿ. ಇನ್ನು ಮುಂದೆ ದೇಶದಲ್ಲಿ ಇಂಥ ಅಚಾತುರ್ಯ ನಡೆಯಬಾರದು ಎಂದು ಮಾಡಿ. Retrospective effect ಎಂದರೆ, ಸತ್ತಮಗುವಿಗೆ ನಾಮಕರಣ ಮಾಡಲು ಹೊರಟಿರುವುದು ನ್ಯಾಯವೇ ಎಂದು ಕೇಳು ತ್ತೇನೆ. ಐದುವರ್ಷಗಳ ಕೆಳಗೆ ಏನು ಆಯಿತೋ, ಏನು ಕೆಲಸವಾಗಬೇಕಾಗಿತ್ತೋ ಅದನ್ನು ಮಾಡದೆ ಇವೊತ್ತಿನ ದಿವಸ ಆ ಕೆಲಸವನ್ನು ಮಾಡುತ್ತಿರುವು ದಕ್ಕೆ ಸಭೆ ಅನುಮತಿಯನ್ನು ಕೊಡಬೇಕು, ತಿದ್ದು ಪಡಿಯನ್ನು ಒಪ್ಪಬೇಕು ಎಂದು ತಂದಿರುವುದು ಸರಿಯೇ ಎಂದು ಕೇಳುತ್ತೇನೆ.

1959ರಲ್ಲಿ ಸೇಲ್ಸ್ ಟ್ಯಾಕ್ಸ್ ಕೊಟ್ಟವನು, 1959 ರಲ್ಲಿ ಇಣಕಂಟಾಕ್ಸ್ ಕೊಟ್ಟಿದ್ದಾನೆ. 1960ರಲ್ಲಿ ಸೇಲ್ಸ್ ಟ್ಯಾಕ್ಸ್ ಕೊಟ್ಟವನು 60ರಲ್ಲಿ ಇಣಕಂಟ್ಯಾಕ್ಸ್ ಕೊಟ್ಟಿದ್ದಾನೆ. ಅವರ ಲೆಕ್ಕ ಇಣಕಂಟ್ಯಾಕ್ಸ್ ಆಫೀಸಿ ನಲ್ಲಿದೆ. ಸೇಲ್ಸ್ ಟ್ಯಾಕ್ಸ್‌ಗೆ ಸಂಬಂಧಪಟ್ಟ ಒಂದು ವಿಷಯ ಕೋರ್ಟಿನಲ್ಲಿದೆ, ಮತ್ತೊಂದು ವಿಷಯ ಇನ್ನೊಂದಾಗಿದೆ. ಹೀಗೆ ಒಬ್ಬ ಮನುಷ್ಯನನ್ನು ಇಕ್ಕಟ್ಟಿಗೆ ಸಿಕ್ಕಿ ಹಾಕುತ್ತೀರಿ. Retrospective effect ಎಂದರೆ ಐದು ವರ್ಷಗಳ ಹಿಂದಿನಿಂದ ಈ ತಿದ್ದುಪಡಿ ಜಾರಿಗೆ ಬಂದಂತೆ ಮಾಡುವುದು ನ್ಯಾಯವೇ ಎಂದು ಕೇಳುತ್ತೇನೆ.

ಅನೇಕರು ನ್ಯಾಯವಾದಿಗಳಿದ್ದೀರಿ. ಹತ್ತಾರು ವರ್ಷಗಳಕಾಲ ಮಂತ್ರಿಗಳಾದವರಿದ್ದೀರಿ. ಯಾರಾ ದರೂ layman ಇದ್ದಾರೆಯೇ? ಎಲ್ಲ ಮೇಧಾವಿ ಗಳಿದ್ದೀರಿ. ಹೈಕೋರ್ಟ್ ತೀರ್ಮಾನಮಾಡಿ ಜನಗಳ ದುಡ್ಡನ್ನು ವಾಪಸು ಕೊಡಿ ಎಂದರೆ, ಅದನ್ನು ಕೊಡು ವುದಕ್ಕಾಗುವುದಿಲ್ಲ. ತಾವು ನೇಮಕ ಮಾಡಿದಂಥ ಶ್ರೀ ಎ. ಜಿ. ರಾಮಚಂದ್ರರಾಯರ ಕಮಿಟಿಯವರು, ಮೂರನೆಯ ಯೋಜನೆಗೆ 49 ಕೋಟಿ ರೂಪಾಯಿಗಳು ಕಡಮೆ ಬೀಳುವುದನ್ನು ಸರಿದೂಗಿಸಬೇಕೆಂದು ಹೇಳಿ ರುವುದಕ್ಕೆ ಯಾವ ಯಾವ ಮಾರ್ಗದಲ್ಲಿ ಹಣ ಹೊಂದಿಸ ಬೇಕು ಎನ್ನುವ ದೃಷ್ಟಿಯಿಂದ ಜನಗಳಿಗೆ ತೊಂದರೆ ಕೊಡಲು ಹೊರಟಿದ್ದೀರಾ? ಜನಗಳಿಗೆ ಇಕ್ಕಟ್ಟು ಕೊಟ್ಟರೆ ದೇಶದಲ್ಲಿ ವ್ಯಾಪಾರ ಅಭಿವೃದ್ಧಿಯಾಗುವು ದಕ್ಕೆ ಶಕ್ಯವಾಗುತ್ತದೆಯೇ ಎಂದು ಯೋಚನೆಮಾಡಿ. ಶ್ರೀ ಗಾಂಜಿವೀರಪ್ಪನವರು ಹೇಳಿದರು; ಜನಗಳ ಹತ್ತಿರ ತೆಗೆದುಕೊಂಡಿದ್ದೀರಿ, ಅದ್ದರಿಂದ ಆ ಹಣ ವಾಪಸು ಏಕೆ ಕೊಡಬೇಕು ಎಂದು. ಇವರು ಕನವರಿ ಸುತ್ತಿದ್ದಾರೆಯೋ ಏನೋ ಗೊತ್ತಿಲ್ಲ. ಕೋರ್ಟಿ ನವರು ಹಣವನ್ನು ವಾಪಸು ಕೊಡಬೇಕೆಂದು ಹೇಳಿ ದ್ದಾರೆ.

Sri GANJI VEERAPPA.—They have paid the amount to Government.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನೇ ನಾನು ತಮಗೂ ಹೇಳುತ್ತಿರುವುದು. ತಾವು ನ್ಯಾಯವ್ಯಾದಿ ಗಳು. ಒಂದು ದಾವಾ ಹಾಕಿ ಕೋರ್ಟಿನಿಂದ ಡಿಕ್ರಿ ಪಡೆಯುತ್ತೀರಿ. ಆದರೆ ಆ ದುಡ್ಡು ನಿಮಗೆ ಸೇರತಕ್ಕ ದ್ದಲ್ಲ ಎಂದು ಕಾನೂನು ಮಾಡಿಸುತ್ತೀರಾ? ತಾವ್ ನ್ಯಾಯವಾದಿಗಳಾಗಿ ಸರಿಯಾಗಿ ಭಾಷಣಮಾಡಿಲ್ಲ. ನ್ಯಾಯವಾದವನ್ನು ಎತ್ತಿಹಿಡಿಯದೆ ಎಲ್ಲಿ ಅನ್ಯಾಯ ವಾಗುತ್ತದೆಯೋ ಅದನ್ನು ಎತ್ತಿಹಿಡಿಯುವುದಕ್ಕೆ ಹೊರಟಿದ್ದೀರಿ. ಇದಕ್ಕೆ ಕಾರಣ ಸೂತಕದ ಗಾಳಿಗೆ ಸಿಕ್ಕಿಹಾಕಿಕೊಂಡಿದ್ದೀರಿ. ನೀವು ಹೇಳಿದ್ದೇ ಸರಿ ಎಂದು ಹೇಳುತ್ತೀರಿ. ಕಾಗೆ ಬೆಳ್ಳಗೆ ಇತ್ತು ಎಂದರೆ ನಾನು ನೋಡಿ ಬಂದೆ, ಜತ್ತಿಯವರ ಮನೆ ಮುಂದೆ ಕುಳಿತಿತ್ತು ಎಂದು ಹೇಳುತ್ತೀರಿ. ಕಾಗೆ ಕಪ್ಪು ಇರು ತ್ತದೆ, ಬೆಳ್ಳಗೆ ಅಲ್ಲ ಎಂದು ತಿಳಿದೂ ಹಾಗೆ ಹೇಳು ತ್ತೀರಿ.

ಜನಗಳ ಮೇಲೆ ತೆರಿಗೆ ಹಾಕುವುದನ್ನು ನೇರವಾಗಿ ಹಾಕಿ ವಸೂಲ್ಮಾಡಿ. ಈ ಕುಂಭಕೋಣವನ್ನು ಬಿಡಿ, round about way ಬಿಡಿ. ಕೊಂಕಣಸುತ್ತಿ ಮೈಲಾರಕ್ಕೆ ಹೋಗುವುದು ಬೇಡ ಎಂದು ಹೇಳು ತ್ತೇನೆ. ಈಗ ಅಧಿಕಾರ ಪಕ್ಷದವರು ಮಾಡುತ್ತಿರು ವುದು Contempt ಅಲ್ಲವೋ, ಹೈಕೋರ್ಟಿಗೆ ಅವ ಮಾನ ಮಾಡಲಿಲ್ಲವೋ? ಹೈಕೋರ್ಟ್ ತೀರ್ಪನ್ನು ನೀವು Comment ಮಾಡಲಿಲ್ಲವೋ? ಯಾವತ್ತು ಈ ತಿದ್ದುಪಡಿ ಅಂಗೀಕಾರವಾಗುತ್ತದೆಯೋ ಆ ಹೊತ್ತಿ ನಿಂದ ಮಾತ್ರಇದನ್ನು ಜಾರಿಗೆ ಕೊಡುತ್ತೇವೆಂದರೆ ಒಪ್ಪಿಕೊಳ್ಳುತ್ತೇನೆ.

ನೀವು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡುವುದರಿಂದ

ಕೊಬ್ಬರಿ, ಹತ್ತಿ, ಶೇಂಗಾಯಿ ಮುಂತಾದುವುಗಳಲ್ಲಿ ವ್ಯಾಪಾರ ಮಾಡುವವರೆಲ್ಲಾ ದೇಶ ಬಿಟ್ಟು ಓಡಿಹೋಗಿ, ರಾಜಕೀಯ ವ್ಯಾಪಾರ ಮಾಡುವವರು ದೇಶದಲ್ಲಿ ಉಳಿಯುತ್ತಾರೆ; ಇನ್ನು ಯಾರೂ ಉಳಿಯಲಿಕ್ಕೆ ಶಕ್ಯವಿಲ್ಲ. ಅದಕ್ಕೋಸ್ಕರ ಈ ತಿದ್ದುಪಡಿಗಳನ್ನು ವಾಪಸ್ಸು ತೆಗೆದುಕೊಳ್ಳಿ. ಇಲ್ಲದೆ ಹೋದರೆ, ದೇಶದ ಜನಗಳಿಗೆ ಅನ್ಯಾಯ ಮಾಡಬಾರದೆಂದಿದ್ದರೆ, ಒಂದು ಸೆಲೆಕ್ಟ್ ಕಮಿಟಿ ಮಾಡಿ. ಅವರಿಂದ ರಿಪೋರ್ಟ್ ತೆಗೆದುಕೊಂಡು, ಇದರಲ್ಲಿರುವ ಡಿಫೆಕ್ಟುಗಳನ್ನು ತೆಗೆದುಹಾಕಿ. ಮಸೂದೆ ಪಾಸ್ ಮಾಡಿ. ಕೋರ್ಟುಗಳಿರುವುದು ಜನಗಳಿಗೆ ನ್ಯಾಯ, ರಿಲೀಫ್ ದೊರಕಿಸಿಕೊಡುವುದಕ್ಕೆ, ಕೋರ್ಟಿನಿಂದ ಡಿಕ್ರಿ ತೆಗೆದುಕೊಂಡು ಬಂದರೆ ಅದನ್ನು ಎಕ್ಸಿಕ್ಯೂಟ್ ಮಾಡಬೇಕು. ಅದಿಲ್ಲದೆ ಎಲ್ಲಾ ವ್ಯಾಲಿಡೇಟ್ ಮಾಡಿಕೊಂಡು ಹೋಗುವುದಾದರೆ ಕೋರ್ಟು ಕಚೇರಿಗಳನ್ನು ಏಕೆ ಇಟ್ಟಿದ್ದೀರಿ? ಮುಚ್ಚಿಬಿಡಿ. ಲಾ-ಕಾಲೇಜ್‌ಗಳನ್ನೂ ಮುಚ್ಚಿಬಿಡಿ. ಲಾಯರುಗಳೂ ಏಕೆ? ಶ್ರೀ ವರ್ಮಾ ಕಂಠಿಯವರಿಗೆ ಏನಾದರೂ ಪುನಃ ಪ್ರಾಕ್ಟೀಸ್ ಮಾಡಬೇಕೆಂಬ ಮನಸ್ಸಿದ್ದರೆ, ನಾನು ಹೇಳಿದ್ದನ್ನು ಸ್ವಲ್ಪ ಯೋಚನೆ ಮಾಡುತ್ತಿದ್ದರು. "ನನಗೆ ಪ್ರಾಕ್ಟೀಸ್ ಬೇಡ, ಇನ್ನು ಐದು ವರ್ಷ ಕಾಲ ಮಂತ್ರಿಪದವಿ ಸಿಕ್ಕಿಬಿಟ್ಟಿದೆ" ಎಂದು ಇದ್ದು ಬಿಟ್ಟಿದ್ದಾರೆ.

Mr. SPEAKER.—[Addressing Sri Muckannappa] The Bill has nothing to do with the term and tenure of the individual or ministership.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇದನ್ನು ಏಕೆ ಹೇಳುತ್ತೇನೆಂದರೆ, "ಪದವಿಪೂರ್ವ ಪುಣ್ಯಾನಾಂ" ಎಂಬಂತೆ, ಅಧಿಕಾರ ಯಾವುದೋ ಪುಣ್ಯಫಲದಿಂದ ಹುಟ್ಟಿಕೊಂಡು ಬಂದಿದೆ. ಅದನ್ನು ಉಳಿಸಿಕೊಂಡು ಬರಬೇಕಾಗಿದ್ದರೆ ತಮಗೆ ಇರತಕ್ಕಂಥ ಅನುಭವದೊಳಗೆ ಇಂಥ ಅನಾಹುತ ಮಾಡತಕ್ಕಂಥ ಕಾನೂನು ಕಡತಕ್ಕೆ ಏರಬಾರದು. ಅವರು ಲಾ ಪಾಸು ಮಾಡಿ, ಕೋರ್ಟಿನ ಲಾಯರಾಗಿ ಪ್ರಾಕ್ಟೀಸ್ ಮಾಡಿ, ಬೋರ್ಡ್ ಹಾಕಿಕೊಂಡಿದ್ದು ವಕಾಲತ್ತು ಹಾಕಿ, ಕೋರ್ಟಿನಲ್ಲಿ ವಾದ ಮಾಡಿ, ಹೈಕೋರ್ಟ್ ಜಡ್ಜ್‌ಮೆಂಟಿಗೋಸ್ಕರ ತಿದ್ದುಪಡಿ ಮಾಡುತ್ತೇವೆಂದು ಹೇಳುವುದು ನ್ಯಾಯವೇ? ಚಾಪೆ ಕೆಳಗೆ ತೂರುತ್ತೇವೆಂದು ಹೇಳಿದರೆ, ರಂಗೋಲಿ ಕೆಳಗೆ ತೂರುತ್ತೇವೆಂದು ಕಂಠಿ ಸರ್ಕಾರದವರು ಹೇಳಿ ತೂರುತ್ತಾ ಇದ್ದಾರೆ. ಕಾನೂನಿನಲ್ಲಿ ತಪ್ಪುಗಳಿವೆಯೆಂದು ಜಜ್‌ಮೆಂಟ್ ಬರೆದು ಕಳುಹಿಸಿದರೆ, ಸಭೆಯಲ್ಲಿ ಎಲ್ಲಾ ನಮ್ಮ ಜನ ಇದ್ದಾರೆಯೆಂದು. ಈ ಅಮೆಂಡ್‌ಮೆಂಟ್ ತಂದು ಈ ಮಸೂದೆ ಪಾಸ್ ಮಾಡಬೇಕೆಂದಿದ್ದಾರೆ. ಹೀಗೆ ಮಾಡಿದರೆ ಜನ ಏನು ಹೇಳುತ್ತಾರೆ? ಹೀಗೆ ಮಾಡಿದರೆ ದೇಶದಲ್ಲಿ ಇನ್‌ಸೆಕ್ಯೂರಿಟಿ ಭಯ ಭ್ರಾಂತಿಯುಂಟಾಗುತ್ತದೆ. ಆದ್ದರಿಂದ ಇಂಥ ಕಾನೂನನ್ನು ಮಾಡಬಾರದು ಎಂದು ತಮ್ಮಲ್ಲಿ ಬಹಳ ವಿನಯವಾಗಿ ಪ್ರಾರ್ಥನೆ ಮಾಡುತ್ತೇನೆ. ನನ್ನ ಸ್ನೇಹಿತರಾದ ಶ್ರೀ ವರ್ಮಾ ಪಾಟೀಲರು ಹೇಳಿದ ಹಾಗೆ, ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಿ ಇಲ್ಲವೇ ಸ್ವಲ್ಪ ಕಾಲ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಅವರು ಇದರಲ್ಲಿರುವ ತಪ್ಪುಗಳನ್ನು ವಿಮರ್ಶೆ ಮಾಡಿ, ವಿಮರ್ಶಾತ್ಮಕ ತಿದ್ದುಪಡಿಗಳನ್ನು ನಮ್ಮ ಮುಂದಿಡಲಿ, ಆಮೇಲೆ ಈ ಸಭೆಯವರು ಅಭಿಪ್ರಾಯ ವ್ಯಕ್ತಪಡಿಸಿ ಒಪ್ಪಿಗೆ ಕೊಡಲಿ. ಸೆಕ್ಷನ್ 40ಕ್ಕೆ ಇರುವ ಅಮೆಂಡ್‌ಮೆಂಟನ್ನು ಓದಿಬಿಡುತ್ತೇನೆ.

'4. Amendment to section 40.—In section 40 of the principal Act, after sub-section (1), the following sub-section shall be, and shall always be, deemed to have been inserted, namely:—

"1 (A) Notwithstanding anything contained in sub-section (1), nothing contained in any of the repealed enactments or the rules made thereunder limiting the time within which any action may be taken or any order, assessment or re-assessment may be made shall apply to an assessment or re-assessment made on the assessee or any person in consequence of, or to give effect to any finding direction or order made under any provision of the relevant repealed enactment or any judgment, decree or order made by the Supreme Court, the High Court or any other Court whether before or after the commencement of this Act".

ಇವರು ಹೈಕೋರ್ಟಿಗೂ ಕೈ ಚಾಚಿ ಬಿಟ್ಟಿರುವುದಲ್ಲದೆ, ಸುಪ್ರೀಂ ಕೋರ್ಟ್‌ನವರು ಮಾಡಿದ್ದನ್ನು ಇಲ್ಲಿ ಫೇಲ್ ಮಾಡಬೇಕೆಂದು ಹೊರಟುಬಿಟ್ಟಿದ್ದಾರೆ. ನಿಮಗೆ ಲೀಗಲ್ ಡಿಪಾರ್ಟ್‌ಮೆಂಟ್ ಎಂದಿದೆಯಲ್ಲಾ, ಅದು ಹೈಕೋರ್ಟಿನ ಅಧೀನದಲ್ಲಿ ಕೆಲಸ ಮಾಡುತ್ತದೆಯೋ, ಅಥವಾ ಹೈಕೋರ್ಟ್ ಮೇಲಿದ್ದುಕೊಂಡು ಅವರಿಗೆ ಬುದ್ಧಿವಾದ ಹೇಳುತ್ತದೆಯೋ? ಈ ಡಿಪಾರ್ಟ್‌ಮೆಂಟಿನಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಲೆವಲ್ಲಿನ ಒಬ್ಬ ಅಧಿಕಾರಿ ಇದ್ದಾರೆ. ಇಂಥ ಒಬ್ಬ ಅಧಿಕಾರಿ ಈ ಒಂದು ಕಾನೂನನ್ನು ಸ್ಕ್ರೂಟಿನಿ ಮಾಡಿ, ಈ ಕಾನೂನಿನಲ್ಲಿ ತಪ್ಪಿಲ್ಲ, ಇದರಲ್ಲಿ ಹೈಕೋರ್ಟಾಗಲಿ, ಸುಪ್ರೀಂ ಕೋರ್ಟಾಗಲಿ ಕೈಹಾಕುವುದಕ್ಕೆ ಸಾಧ್ಯವಿಲ್ಲ; ಇದನ್ನು ಮಾಡಬಹುದು ಎಂದು ಹೇಳತಕ್ಕಂಥಾದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒರಿಜಿನಲ್ ಆಕ್ಟ್ ಮಾಡುವಾಗ ಅವರು ನಿಮಗೆ ಬುದ್ಧಿವಾದ ಹೇಳುವುದು ಸರಿ. ಆದರೆ ಲಾ-ಸೆಕ್ರಟೇರಿಯಟ್ಟಿನಲ್ಲಿ ಕೊಟ್ಟಂಥ ಬುದ್ಧಿವಾದದ ಮೇಲೆ ಹೈಕೋರ್ಟಿನ ತೀರ್ಪಿಗೆ ಏಕೆ ಮಸಿ ಬಳಿಯಲು ಬಂದಿದ್ದೀರಿ? ಚೇಳಿನ ಮಂತ್ರ ತಿಳಿದುಕೊಂಡು ಹಾವಿನ ಬುಟ್ಟಿಗೆ ಕೈ ಇಟ್ಟಿದ್ದೀರಿ. ಚೇಳು ಕಡಿದಾಗ, ಈರುಳ್ಳಿ ಕೊಡಬೇಕೇ, ಬೆಳ್ಳುಳ್ಳಿ ಕೊಡಬೇಕೇ ಎನ್ನುವುದು ಗೊತ್ತಿಲ್ಲ. ಹಾಗಿರುವಾಗ ನಾಗರಹಾವು ಎಬ್ಬಿಸಿ, ಅದಕ್ಕೆ ಮೂರು ಗೆರೆ ಇದೆಯೋ, ನಾಲ್ಕು ಗೆರೆ ಇದೆಯೋ ಎಂದು ನೋಡಲು ಹೊರಟಿದ್ದೀರಿ. ಇದು ನ್ಯಾಯವೇ? ಸರಿಯೇ? ನೀವು ಈ ಅಮೆಂಡ್‌ಮೆಂಟನ್ನು ತಂದು ವರ್ತಕರ ಮೇಲೆ ಧಾಳಿ ಮಾಡಿ ಅವರನ್ನು ನಾಶ ಮಾಡುವುದಕ್ಕೆ ಹೊರಟಿದ್ದೀರಿ. ಒಂದು ಕಡೆ ನೀವು ದೇಶದಲ್ಲಿ ವ್ಯಾಪಾರ ಅಭಿವೃದ್ಧಿಯಾಗಬೇಕೆಂದು ಹೇಳುತ್ತೀರಿ, ಇನ್ನೊಂದು ಕಡೆ ವರ್ತಕರನ್ನು ಹಿಂಸೆ ಮಾಡುತ್ತೀರಿ. ನಿಮ್ಮ ಮಾತಿನಲ್ಲಿ ಒಂದಕ್ಕೊಂದಕ್ಕೆ ಸಾಮಂಜಸ್ಯವಿಲ್ಲ. ಅದಕ್ಕೋಸ್ಕರ ಈ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮತ್ತೊಂದು ಸಾರಿ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಬೇರೆ ಬೇರೆಯ ಅಧಿಕಾರಿಗಳಲ್ಲಿರು

(ಶ್ರೀ ಸಿ. ಜೆ, ಮುಕ್ಕಣ್ಣಪ್ಪ)

ವವರಿಗೆ ಇರಬೇಕಾದ ಗುಣಗಳನ್ನು ಸೋಮೇಶ್ವರ ಶತಕದಲ್ಲಿ ತಿಳಿಸಿದೆ. ಅಧಿಕಾರವಿರುವಾಗ, ಕಾನೂನು ಅಮಲಿರುವಾಗ, ಕಾನೂನು ಮಾಡುತ್ತಿರುವುದು ನ್ಯಾಯ ವೇ ತಪ್ಪೇ ಎನ್ನುವುದು ಗೊತ್ತಾಗುವುದಿಲ್ಲ; ನಾವು ಮಾಡಿದ್ದೇ ಸರಿ ಎಂದು ಹೇಳುತ್ತೇವೆ. ಈ ಮಹಮದ್-ಬಿನ್-ತೊಗಲಕ್ ಆಡಳಿತ ಬೇಡ. ಮಹಮದ್-ಬಿನ್-ತೊಗಲಕ್ ಕಾಲದಲ್ಲಿ ಚರ್ಮದ ನಾಣ್ಯ ತೆಗೆದುಕೊಂಡು ಬಂದ. ನೀವು ಪೇಪರ್ ಕರೆನ್ಸಿ ಮಾಡಿ ಮಕ್ಕಳ ಕೈಯಲ್ಲಿ ಗಾಳಿಪಟ ಕೊಟ್ಟಹಾಗೆ ಕೊಟ್ಟಿದ್ದೀರಿ. ನಿಮ್ಮ ಅಧಿಕಾರ ಕಾನೂನುಗಳೆಲ್ಲವೂ ನಿಕೃಷ್ಟತೆಯಿಂದ ನಿಮ್ಮಲ್ಲಿ ಹಣದ ಆಸೆ ಇರುವವರನ್ನು ತೃಪ್ತಿಪಡಿಸುವುದಕ್ಕೆ ದೇಶದಲ್ಲಿ ದೊಡ್ಡ ದೊಡ್ಡ ಡಿಪಾರ್ಟ್‌ಮೆಂಟುಗಳನ್ನು ಮಾಡಿ, ಕಮಿಟಿಗಳನ್ನು ಮಾಡಿ, ಬೋರ್ಡುಗಳನ್ನು ಮಾಡಿ, ಸೆಕ್ರೆಟರಿಗಳಿಗೆ, ಅಧ್ಯಕ್ಷರಿಗೆ, ಮುಂತಾದವರಿಗೆ ಭಾರಿ ವೇತನಗಳನ್ನು ಕೊಡುತ್ತೀರಿ. ಆದರೆ, ಪಾಪ, ಸಣ್ಣಪುಟ್ಟ ವರ್ತಕರು ಕಾನೂನು ಪರಿಮಿತಿ ಕೆಳಗೆ ಶೆಲ್ಟರ್ ತೆಗೆದುಕೊಳ್ಳು ತ್ತೇವೆಂದರೆ, ಶ್ರೀಮಾನ್ ಕಂಠಿಯವರೇ, ಅವರ ಮೇಲೆ ಚಂದ್ರಾಯುಧ ಉಪಯೋಗಿಸುವುದು ಸರಿಯೇ?

Mr. SPEAKER.—You must address the Chair and not the individual.

Sri C. J. MUCKANNAPPA.—It is through you, Sir, that I address the Chief Minister.

ಇದನ್ನು ಏಕೆ ಹೇಳುತ್ತೇನೆಂದರೆ, ಈ ತಿದ್ದುಪಡಿ ಬಂದಾಗಿನಿಂದಲೂ, ಮನಸ್ಸಿಗೆ ನೋವಾಗಿದೆ. ಈ ತಿದ್ದುಪಡಿ ಸರಿಯೇ! ಶ್ರೀ ವೀರಪ್ಪನವರು ಮಸೂದೆ ಯನ್ನೆಲ್ಲಾ ಓದಿದ್ದೇನೆಂದು ಹೇಳಿದರು. ಶ್ರೀಮಾನ್ ಷಂಶುದ್ದೀನ್ ಅವರು, ಬಹಳ ಕೇರ್‌ಫುಲ್ಲಾಗಿ ಸ್ಟಡಿ ಮಾಡಿದ್ದೇನೆಂದು ಹೇಳಿದರು. ಅಕ್ಷರಶಃ ಎಲ್ಲಾ ಚೆನ್ನಾಗಿ ಅಭ್ಯಾಸ ಮಾಡಿದ್ದೇನೆಂದು ಹೇಳಿದರು. ಆದರೆ ಒಂದು ವಿಷಯವನ್ನು ನೋಡಲಿಲ್ಲ. ಹೈಕೋರ್ಟಿನವರು ನೀವು ಮಾಡಿರುವುದು ತಪ್ಪು ಎಂದು ಹೇಳಿರುವುದನ್ನು ಮರೆತುಬಿಟ್ಟರು. 1959ನೆಯ ಇಸವಿಯೊಳಗೆ ಯಾರಾ ದರೂ ಒಂದು ಗೃಹಸ್ಥ ಮನೆತನದಲ್ಲಿ ಮದುವೆ ಮಾಡಿ ಕೊಂಡು, ಐದು ವರ್ಷ ಹುಡುಗಿಯನ್ನು ಬಿಟ್ಟು ಬಿಟ್ಟು ಮತ್ತೆ ಮಾಂಗಲ್ಯ ಕಟ್ಟಿ ಮದುವೆ ಮಾಡಿಕೊಂಡರೆ ಆಭಾಸವಾಗಿ ಕಾಣುತ್ತದೆಯೋ ಇಲ್ಲವೋ, ಹಾಗೆಯೇ 1959ರೊಳಗೆ ಆದ ಒಂದು ಕಾನೂನಿಗೆ ಇವೊತ್ತು ಮಾಂಗಲ್ಯಧಾರಣೆ ಮಾಡುವುದಕ್ಕೆ ಹೊರಟರೆ ಎಷ್ಟರ ಮಟ್ಟಿಗೆ ನ್ಯಾಯ ಅನ್ನುವುದನ್ನು ಯೋಚನೆ ಮಾಡಿ ಎಂದು, ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಈ ತಿದ್ದುಪಡಿಯಿಂದ ದೇಶಕ್ಕೆ ಅನ್ಯಾಯವಾಗಿ, ವ್ಯಾಪಾರವೆಲ್ಲಾ ನಿಂತು ಹೋಗು ತ್ತದೆ. ದೇಶದಲ್ಲಿ ಮೋಸ, ದಗ, ಖೂನಿ ಮಾಡುವ ಜನಗಳಿಗೆ ಅವಕಾಶಮಾಡಿಕೊಟ್ಟ ಹಾಗಾಗುತ್ತದೆ. ಹೀಗೆ ಮಾಡಿದರೆ ಸತ್ಯವೆಲ್ಲಿದೆ, ಮೊನ್ನೆ ಅಲಹಾಬಾದಿ ನಲ್ಲಿ ಚಾಗ್ಲಾರವರು, Bad drafting of law ಎಂಬ ಬಗ್ಗೆ ಹೇಳಿದ್ದಾರೆ ಅದನ್ನು ಹಿಂದೂಸ್ತಾನ್ ಸ್ಟ್ಯಾಂಡರ್ಡಿನಲ್ಲಿ ಓದಿದೆ ಎಂದು ಕಾಣುತ್ತದೆ. ಪ್ರತಿ ಬೆಳ್ಳಿಗ್ಗೆ ಕಾನೂನು ಮಾಡುತ್ತಾ ಇದ್ದೀರಿ; ವಿಧೇಯಕ ವನ್ನು ತರುತ್ತಾ ಇದ್ದೀರಿ. ಅವರು ಎರಡು ಕಾನೂನು ಗಳ ಮಧ್ಯೆ ಜೀವಿಸಬೇಕಾಗಿದೆ. ಈ ತಿದ್ದುಪಡಿಯ ಮಸೂದೆಯನ್ನು ಜಾರಿಗೆ ತಂದಾಗ, ನಿಮ್ಮ ಆಫೀಸರು ಗಳು ಡೀಲರುಗಳ ಪುಸ್ತಕ ಸೀಸ್‌ಮಾಡಿದಾಗ, ಅವರು ಹೈಕೋರ್ಟಿನಲ್ಲಿ ಒಂದು ರಿಟ್ ಹಾಕಿಯೇ ಹಾಕು ತ್ತಾರೆ. ಅವಗ ಶ್ರೀಮಾನ್ ಕಂಠಿಯವರು ಇರುತ್ತಾ ರೆಯೋ ಯಾರು ಇರುತ್ತಾರೆಯೋ ಗೊತ್ತಿಲ್ಲ. ಈಗ ತಾನೇ ಶ್ರೀಮಾನ್ ಷಂಶುದ್ದೀನ್ ಅವರು ಹೇಳಿದರು, ಈ ಮಸೂದೆಯೊಂದಿಗೆ ಹೈಕೋರ್ಟ್ ಜಡ್ಜ್‌ಮೆಂಟ್ ಕೂಡ ಪ್ರಿಂಟ್ ಮಾಡಬೇಕಾಗಿತ್ತೆಂದು. ಅವರು ಅಧಿಕಾರದಲ್ಲಿದ್ದಾಗ, It is unnecessary, it is not warranted ಎಂದು ಹೇಳುತ್ತಿದ್ದರು. ಅವರು ಅಧಿಕಾರದಲ್ಲಿ ಈಗ ಇಲ್ಲವೆಂದು ಹೀಗೆ ಹೇಳುತ್ತಿ ದ್ದಾರೆ. ಅಧಿಕಾರಕ್ಕೋಸ್ಕರ ಕಚ್ಚಾಡತಕ್ಕಂಥ ಪಕ್ಷ, ದೇಶಕ್ಕೆ ಅನಾಹುತವಾಗತಕ್ಕಂಥ ಕಾನೂನನ್ನು ಮಾಡಿ ಅಧಿಕಾರದಿಂದ ಕುಸಿದುಬೀಳದೆ ಬಿಟ್ಟು, ದೇಶದಲ್ಲಿ ಒಳ್ಳೆಯ ಸಮಾಜರಚನೆಯಾಗುವ ಕಾರ್ಯಮಾಡಿ, ಇನ್ನೂ ಐದು ವರ್ಷಗಳ ಕಾಲ ಇರಲಿ.

†ಶ್ರೀ ಕೆ. ಪಿ. ಗದಗ್ (ಗದಗ್).—ಅಧ್ಯಕ್ಷರೇ, 1962ನೆಯ ಮೈಸೂರು ಮಾರಾಟತೆರಿಗೆಯ ಶಾಸನದ ತಿದ್ದುಪಡಿಯನ್ನು ನಾನು ಅನುಮೋದಿಸುವ ಅಥವಾ ಅದನ್ನು ವಿರೋಧಿಸುವ ಗೊಡವೆಗೆ ಹೋಗದೆ ಅದರ ಸ್ವರೂಪ ಏನಿದೆ ಎನ್ನುವುದನ್ನು ಸಂಕ್ಷೇಪವಾಗಿ ಹೇಳಬಯಸುತ್ತೇನೆ.

ಈಗ ತಿದ್ದುಪಡಿಮಾಡಲು ಹೊರಟಿರತಕ್ಕ ಈ 7ನೆಯ ಕಲಂ ಏನಿದೆ ಇದು ಬಹಳ ಮಹತ್ವದ್ದಿದೆ. 1957 ರಲ್ಲಿ ಈ ಮಾರಟ ತೆರಿಗೆ ಆಕ್ಟ್ ಬಂದಾಗ ಯಾವ ಸ್ವರೂಪ ದಲ್ಲಿತ್ತು ಅನಂತರ 1958ರಲ್ಲಿ ಏನಾಯಿತು ಮತ್ತು 1959ರಲ್ಲ ಇದರ ಸ್ವರೂಪ ಹೇಗೆ ಬದಲಾಯಿತು ಎನ್ನುವುದು ಬಹಳ ಮಹತ್ವದ ವಿಷಯವಾಗಿದೆ. ಆದರೆ 1958ಕ್ಕೂ 1959ಕ್ಕೂ ವ್ಯತ್ಯಾಸ ಆಗಿರತಕ್ಕದ್ದು ಕೇವಲ ಒಂದೇ ಒಂದು ಅಂಕೆಯಾಗಿದ್ದರೂ ಇದರ ಪರಿಣಾಮ ವ್ಯಾಪಾರಸ್ಥರ ಮೇಲೆ ಬಹಳ ಮಹತ್ವ ಪೂರಿತ ಬದಲಾವಣೆಯನ್ನು ತಂದಿದೆ. 1958ರಲ್ಲಿ ಈ ಕ್ಲಾಜಿಗೆ ತಂದ ತಿದ್ದುಪಡಿಯಲ್ಲಿ ಏನಿತ್ತು ಎಂದರೆ This tax shall apply to sales or purchases inside the State ಎಂದು ಇತ್ತು. ಆದರೆ ಅದಕ್ಕೆ ಹಿಂದೆ 1958ರ ಆಕ್ಟ್ಯೆರುವರೆಗಿದ್ದ ಆಕ್ಟಿನಲ್ಲಿ this tax shall apply only to sales inside the State ಎಂದು ಮಾತ್ರವೇ ಇತ್ತು. ಇದು ಎಲ್ಲರಿಗೂ ಗೊತ್ತಿರ ಬೇಕು. ಹೀಗೆ ಮೂಲಶಾಸನದಲ್ಲಿ ಈ ತೆರಿಗೆ ಏನಿ ದ್ದರೂ ಕೇವಲ ದೇಶದ ಒಳಗಡೆ ನಡೆಯತಕ್ಕ ದಿನಸಿ ಕ್ರಯಗಳಿಗೆ ಮಾತ್ರ ಅನ್ವಯಿಸತಕ್ಕದ್ದು ಎಂದು ಸೂಚಿಸಿ ಅನಂತರ ಅದನ್ನು Sales ಮತ್ತು ಪರ್ಚೆಸಸ್ ಗಳೆರಡಕ್ಕೂ ಅನ್ವಯಿಸತಕ್ಕದೆಂದು ತಿದ್ದುಪಡಿ ಮಾಡಿ ದ್ದಾರೆ. ಹೀಗೆ ಒಂದು ಮೂಲಬದಲಾವಣೆಯಾಗಿರು ವುದರಿಂದ ವರ್ತಕ ಮಂಡಳಿಗೆ ಬಹಳ ತೊಂದರೆ ಯಾಗಿದೆ. ಆದಾಗ್ಗೂ ಶ್ರೀಮಾನ್ ಷಂಶುದ್ದೀನ್ ರವರೂ ಮತ್ತು ಶ್ರೀಮಾನ್ ಗಾಂಜೀವೀರಪ್ಪನವರೂ ಈ ತಿದ್ದುಪಡಿಯನ್ನೊಪ್ಪಿಕೊಳ್ಳುವುದರಲ್ಲಿ ಏನೂ ಅಂಥಾ ವಿರೋಧವಿರುವುದಿಲ್ಲವೆಂದು ಏನು ಹೇಳಿ ದರೋ ಆ ಅಂಶವನ್ನು ಅದು ಹಾಗೆ ಇದೆ ಎಂದು ಒಪ್ಪಿ ಕೊಳ್ಳಲು ಅಂಥಾ ಕಾರಣಗಳೇನೂ ಇಲ್ಲ. ಈ ಸಂದರ್ಭದಲ್ಲಿ ಆ only ಎಂಬ ಒಂದು ಶಬ್ದವೇನಿದೆ ಅದು ಬಹಳ ಮಹತ್ವದ್ದಾಗಿದೆ. ಆದುದರಿಂದ ನಾನೀಗ ಮಾನ್ಯಮಂತ್ರಿಗಳ ಮತ್ತು ಈ ಸಭೆಯ ಮಾನ್ಯ ಸದಸ್ಯರುಗಳ ಗಮನವನ್ನು ಅತ್ತಕಡೆಗೆ ಸೆಳೆಯ ಬಯ ಸುತ್ತೇನೆ. ಆದರೆ ಶ್ರೀಮಾನ್ ಗಾಂಜೀವೀರಪ್ಪನವರು Inter-State Trade ಎಂದು ಒಂದು ವಿಚಾರವನ್ನು ಹೇಳಿದರು. ಅದೂ ಸಹ ಬಹಳ ಮಹತ್ವದ ವಿಚಾರ ವಾಗಿದೆ. ಅದನ್ನು ನಾವು ಸ್ವಲ್ಪ ವಿಚಾರಮಾಡಿ ನೋಡ

ಬೇಕಾಗಿದೆ. ಈಗ ಅವರು ಹೇಳಿದ್ದು : 'provided that no tax shall be levied in respect of such purchases inside the State if the said goods are intended for sale in the course of Inter-State Trade or Commerce' ಎಂದು ಇದೆ. ಇದರ ಅರ್ಥ ಏನೆಂದರೆ ನಮ್ಮ ಸ್ಟೇಟಿನಲ್ಲಿ ಪರಪ್ರಾಂತ್ಯಗಳಲ್ಲಿ ಮಾರಾಟ ಮಾಡುವುದಕ್ಕೋಸ್ಕರವಾಗಿ ಕೊಳ್ಳತಕ್ಕ ಮಾಲುಗಳ ಮೇಲೆ ಟ್ಯಾಕ್ಸ್ ಬೀಳುವುದಿಲ್ಲ ಎಂಬುದೇನೋ ನಿಜವಾದ ಸಂಗತಿಯೇ. ಆದರೂ ಇನ್ನೂ ಸ್ವಲ್ಪ ವಿಚಾರ ಮಾಡತಕ್ಕದ್ದಾಗಿದೆ. ಒಂದು ಸಾಮಾನನ್ನು ಕೊಂಡು ಎಲ್ಲಿ ಹೇಗೆ ಮಾರಾಟ ಮಾಡಿದರೆ ಅದು Inter-State Trade ಆಗುತ್ತದೆ ಅನ್ನುವುದನ್ನು ಮೊದಲು ತೀರ್ಮಾನ ಮಾಡಬೇಕು. ಈ ಸಂಬಂಧದಲ್ಲಿ ಪರಪ್ರಾಂತ್ಯದಲ್ಲಿಮಾರಾಟವಾಗತಕ್ಕ ಗೂಡ್ಸಿನ last purchase inside the State ಯಾವಾಗ ಆಗುತ್ತದೋ ಆಗ ಅದು Inter-State Trade Goods ಆಗುತ್ತದೆ. ಆದರೆ ನಾನೀಗ ಹೇಳತಕ್ಕ ವಿಚಾರವನ್ನು ಇಲ್ಲಿ ಕೊಟ್ಟಿರತಕ್ಕ ಎಕ್ಸ್‌ಪ್ಲನೇಷನ್ ಜೊತೆಗೆ ಸೇರಿಸಿಕೊಂಡು ಓದಿದರೆ ಆಗ ಈ ವಿಚಾರ ಇನ್ನೂ ಚೆನ್ನಾಗಿ ಅರ್ಥವಾಗುತ್ತದೆ. ಇದು ವಿಚಾರ ಮಾಡತಕ್ಕ ಅವಶ್ಯವಾಗಿದೆ. ಶ್ರೀಮಾನ್ ಗಾಂಜಿವೀರಪ್ಪನವರು ಹೇಳಿದ ವಿಚಾರದಲ್ಲಿ ಇನ್ನೂ ಒಂದ ಸಂಶಯ ಬರುತ್ತದೆ. ಶ್ರೀಮಾನ್ ಗಾಂಜಿವೀರಪ್ಪನವರು ಹೇಳಿದ ಅಭಿಪ್ರಾಯದಂತೆ ಶ್ರೀ ಜಿ. ವಿ. ಗೌಡರು ಹೇಳಿರತಕ್ಕ ವಿಚಾರದಲ್ಲಿ ಅಂಥ ಸಂಶಯಗಳೇನು ಇಲ್ಲ. ಆದರೆ ಅದೂ ಕೂಡ ವಿಚಾರ ಮಾಡತಕ್ಕದ್ದಾಗಿದೆ. ಅವರು ಹೇಳಿರತಕ್ಕ ಅಭಿಪ್ರಾಯವನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಈ Inter-State Trade ಎಂಬುದು ಎಲ್ಲಿ ಯಾವ ಸಂದರ್ಭದಲ್ಲಿ Inter-State Trade ಆಗುತ್ತದೆ ; ಯಾವಾಗ ಆಗುವುದಿಲ್ಲ ಎಂಬುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಸರಕು ಪರಪ್ರದೇಶದಲ್ಲಿ ಬಿಕರಿ ಆದರೆ ಮಾತ್ರವೇ ಆಗಲಿ ಅದು Inter-State Trade ಆಗುತ್ತದೆ ; ಇಲ್ಲದಿದ್ದರೆ ಇಲ್ಲ. ಆದುದರಿಂದ Last purchase in the State ಎಂಬುದು ಮಹಾ ಮಹತ್ವಉಳ್ಳದ್ದಾಗಿದೆ. ಆದರೆ ಈಗ ಇಲ್ಲಿ ಕೊಟ್ಟಿರತಕ್ಕ ಎಕ್ಸ್‌ಪ್ಲನೇಟರಿ ನೋಟ್ ಒಂದು ತರಹ ಇದೆ. ಹೀಗಾಗಿ ಈ ವಿಚಾರ ಈಗ ಒಂದು ವಾದಗ್ರಸ್ತ ವಿಚಾರವಾಗಿ ಉಳಿದಿದೆ. ಈ ವಿಚಾರದಲ್ಲಿ ನನ್ನ ಅಭಿಪ್ರಾಯವೇ ಒಂದು ರೀತಿಯಾಗಿದೆ. ಇಲಾಖೆಯವರ ಅಭಿಪ್ರಾಯವೇ ಒಂದು ರೀತಿ ಇದೆ. ಹೀಗೆ ಒಬ್ಬೊಬ್ಬರ ಅಭಿಪ್ರಾಯ ಒಂದೊಂದು ರೀತಿ ಯಾಗಿರುತ್ತದೆ. ಹೀಗಿರುವುದರಿಂದಲೇ ನಮ್ಮ ಹೈಕೋರ್ಟಿನವರು ಆ ರೀತಿ ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಹೈಕೋರ್ಟಿನವರಾದರೂ ಈ ಎಲ್ಲ ಅಂಶಗಳನ್ನೂ ವಿಚಾರಕ್ಕೆ ತೆಗೆದುಕೊಳ್ಳದೆ ಆ ಒಂದು ಜೆಡ್ಜ್‌ಮೆಂಟನ್ನು ಕೊಟ್ಟಿಲ್ಲ. ಆದರೆ ಯಾವುದೇ ಒಂದು ವಿಚಾರದಲ್ಲಾಗಲಿ ರಿಟ್ರಾಸ್ಪೆಕ್ಟೀವ್ ಆಗಿ ಜಾರಿಗೆ ಬರತಕ್ಕದ್ದು ಎಂದು ಹೇಳುವ ಮಾತು ಅಷ್ಟು ಸರಿಯಾದ್ದಲ್ಲ. ಒಂದೆರಡು ವರ್ಷಗಳ ಹಿಂದೆ ಏನೋ ಒಂದು ಸಂಗತಿ ನಡೆದು ಹೋಗಿರುತ್ತದೆ. ಈ ದಿವಸ ಒಂದು ಕಾಯ್ದೆಯ ಪ್ರಕಾರ ಆ ಹಿಂದಿನ ವಿಚಾರಗಳಿಗೆಲ್ಲ ಶಿಕ್ಷೆ ವಿಧಿಸಬೇಕೆಂದು ಹೇಳತಕ್ಕುದ್ದು ಅಷ್ಟೇನು ನ್ಯಾಯ ಸಮ್ಮತವಾಗಿದ್ದಂತೆ ಕಾಣುವುದಿಲ್ಲ. ಈಗ ಬಂದಿರತಕ್ಕ ತಿದ್ದುಪಡಿಯ ಸ್ವರೂಪ ಹೀಗೆ ವಿರೋಧವಾಗಿದೆ. ಇನ್ನು ಅನೇಕ ತೊಡಕುಗಳು ಇದರಲ್ಲಿವೆ. ಆದುದರಿಂದ ನನ್ನ ಅಭಿಪ್ರಾಯ ಇಷ್ಟು ; ಅವಸರದಿಂದ ಇದನ್ನು ಪಾಸ್ ಮಾಡುವುದು ಬೇಡ, ಸರ್ಕಾರದವರು ಮತ್ತೊಮ್ಮೆ ಇದನ್ನು ವಿಚಾರ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಇತ್ತೀಚೆಗೆ Purchase Tax ಎಂದು ಈ ಒಂದು Tax ಬೇರೆ ಸರಕುಗಳ ಮೇಲೆ ಬೀಳುತ್ತಿದೆ. ಕೆಲವು ಕಡೆ ಈ Purchase Tax ವಸೂಲಾಗಿದೆ ; ಇನ್ನು ಕೆಲವು ಕಡೆ ಆಗಿಲ್ಲ. ಸರ್ಕಾರದವರು ಇದನ್ನು ವಿಚಾರ ಮಾಡಬೇಕು. ಈ ಕಾನೂನಿನಿಂದ ಯಾರೊಬ್ಬರಿಗೂ ಅನ್ಯಾಯವಾಗದಿರುವಂತೆ ನೋಡಿ ಮಾಡಬೇಕಾದ್ದು ಸರ್ಕಾರದವರ ಕರ್ತವ್ಯ. ಈಗಾಗಲೇ ಮಾನ್ಯ ಶ್ರೀ ಮುಕ್ಕಣ್ಣಪ್ಪನವರು ಹೇಳಿರುವ ಹಾಗೆ ಈ ಮಸೂದೆಯನ್ನು ಸೆಲೆಕ್ಟ್ ಸಮಿತಿಯವರ ಪರಿಶೀಲನೆಗೆ ಕಳಿಸತಕ್ಕದ್ದು ಸೂಕ್ತವೆಂದು ತಿಳಿಸಿ ನನ್ನ ಹೇಳಿಕೆಯನ್ನು ಮುಗಿಸುತ್ತೇನೆ.

ಶ್ರೀ ಪಿ. ಬಿ. ಬೊಮ್ಮಣ್ಣ (ಅರಸೀಕೆರೆ).—ಸ್ವಾಮಿ ನಾನು ಅರಸೀಕೆರೆಯಿಂದ ಬಂದಿರತಕ್ಕ ಸದಸ್ಯನಾಗಿದ್ದೇನೆ. ಈ ಆಕ್ಟಿನ ವಿಚಾರವಾಗಿ ಕೆಲವು ನ್ಯೂನತೆಗಳಿದ್ದುದರಿಂದ ಅವುಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ನಮ್ಮ ಅರಸೀಕೆರೆಯಿಂದ ಅನೇಕ ಜನ ವರ್ತಕರು ಬೆಂಗಳೂರಿಗೆ ಬಂದಿದ್ದರು. ಆಗ ಅವರ ಜೊತೆಯಲ್ಲಿ ನಾನೂ ಸಹ ಬಂದೆ. ಆ ವೇಳೆಯಲ್ಲಿ ನಾವು ಎತ್ತಿದ ಕೆಲವು ಆಕ್ಷೇಪಣೆಗಳ ಬಗ್ಗೆ ನಮಗೆ ತೃಪ್ತಿಕರವಾದ ಸಮಜಾಯಿಷಿ ಕೊಡಲು ಸಂಬಂಧಪಟ್ಟ ಮಂತ್ರಿಗಳಿಗೆ ಆ ದಿವಸ ಸಾಧ್ಯವಾಗಲಿಲ್ಲ. ಅವರಿಗೆ ಈ ಕಾನೂನನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಕ್ಕೇ ಚೈತನ್ಯವಿಲ್ಲವಾಗಿತ್ತು. ಆಗ ನಾವು ಮತ್ತೊಮ್ಮೆ ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ಕೇಳಿದ್ದಕ್ಕೆ ನೀವು ಕೋರ್ಟಿಗೆ ಹೋಗಿ ಇಲ್ಲಿ ಸಾಧ್ಯವಿಲ್ಲ ಎಂದು ತಿಳಿಸಿಬಿಟ್ಟರು. ಈಗ ಇರತಕ್ಕ ಆಕ್ಟ್ ಡಿಫೆಕ್ಟಿವ್ ಆಗಿದೆ. ಆದರೆ ಈ ತೆರಿಗೆಯನ್ನೇನೂ ವರ್ತಕರು ತಮ್ಮ ಕೈಯಿಂದ ಕೊಡುವುದಿಲ್ಲ. ಅವರು ಬೇರೆಯವರಿಂದ ವಸೂಲ್ಮಾಡಿ ಕೊಡಬೇಕಾಗಿದೆ. ಆದರೂ ಈ ಆಕ್ಟಿನಿಂದ ವರ್ತಕರಿಗೆ ತುಂಬಾ ತೊಂದರೆ ಇರುತ್ತದೆ. ಈ ಹಿಂದೆ ಎಷ್ಟೋ ಸಲ ಇಲಾಖೆಯವರೇ ಇಂತಿಂಥ ವಿಚಾರದಲ್ಲಿ ನಾವು ತೆರಿಗೆ ವಸೂಲ್ಮಾಡುವುದಿಲ್ಲ ಎಂದು ಹೇಳಿದ್ದರು. ಹೀಗಿರುವಾಗ ಈ ದಿವಸ ಇದಕ್ಕೆ ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಟ್ಟು ಜಾರಿಗೆ ತರಬೇಕೆಂದು ಹೇಳಿದರೆ ಇದರಿಂದ ಬಹಳ ತೊಂದರೆಗಳಾಗುತ್ತವೆ. ಮೇಲಾಗಿ ವಸೂಲ್ಮಾಡತಕ್ಕ ಕ್ರಮದಲ್ಲಿ ಅನಾಯಕತ್ವ ಉಂಟಾಗುತ್ತದೆ. ಆದಕಾರಣ ಈ ಮಸೂದೆಯನ್ನು ಸಲೆಕ್ಟ್ ಕಮಿಟಿಗೆ ಕಳಿಸಬೇಕೆಂದು ತಿಳಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. R. KESHAVA MURTHY (Gandasi).—Sir, there is a saying: "Marry in haste and repent at leisure." Similarly, as many of our friends said, this Act was passed in haste and now we have to repent for it. As all of us know, the High Court has declared that the taxes claimed are illegal. The Government wanted to appeal against the decision of the High Court, but as can be seen they could not appeal against the order of the High Court.

5-00 P.M.

So, the front door was almost closed

(SRI H. R. KESHAVA MURTHY)

by the courts and now Government wants to enter through the back door. By passing this Bill individual liberty will be curtailed and it is not in keeping with the spirit of democracy. As far as section 7 is concerned, originally the tax applied only to sales and not to purchases. I fail to understand how they can give retrospective effect to it. I want to know whether it is legal. To give retrospective effcat now by legislation amounts to curtailing the liberty of the individual and my point is whether it is proper to do so especially in a democratic State. Regarding legal implications, my friends have discussed them at large and what I want to say is that such hasty legislations will be a burden on the nation. It is the people at large who will suffer by the mistakes committed by the Government. On page 4 it is stated that no court shall enforce any decree or order directing the refund of any tax or licence fee paid under the principal Act or under the relevant repealed enactment. This is a challenge to the courts and I want to know whether the courts are not competent enough to discuss and give their opinion. I pointed out only Yesterday that sufficient time must be given to discuss such laws and come to a definite conclusion in the interest of the people. Our leader said that this legislation involved a financial loss of nearly Rs. 1½ crores, but in this Bill no such financial statement is annexed and a clear picture of the loss or gain is not given to us. Therefore, I feel that it is not a wholesome legislation.

Coming to section 40, again they are throwing a challenge to the Supreme Court and the High Court. I am sure the courts have the power to deal with faulty legislation and set it right. Therefore, what I want to say is that instead of hurrying through Bills like this, it is better that this Bill be referred to a Select Committee.

ಶ್ರೀ ಎಸ್. ಎ. ವಾಸಣ್ಣಶೆಟ್ಟಿ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ, ಈ ಸೇಲ್ಸ್ ಟ್ಯಾಕ್ಸ್ ತಿದ್ದುಪಡಿ ಮಸೂದೆಯ ಮೇಲೆ ಈಗಾಗಲೇ ಕೆಲವು ಸ್ನೇಹಿತರು ಮಾತನಾಡಿದ್ದಾರೆ. ಸಾಮಾನ್ಯವಾಗಿ ಮೂರನೇ ಮತ್ತು ನಾಲ್ಕನೇ ಷೆಡ್ಯೂಲಿನಲ್ಲಿ ನಮೂದಿಸಿರತಕ್ಕ ಪದಾರ್ಥಗಳ ಪರ್ಚೆಜೆಸ್ ಮೇಲೆ ಟ್ಯಾಕ್ಸ್ ಹಾಕುವುದು ಇದರಲ್ಲಿದೆ. ಆದರೆ ಕೆಲವು ಮುಖ್ಯವಾದ ಪದಾರ್ಥಗಳನ್ನು ಈ ಷೆಡ್ಯೂಲಿನಲ್ಲಿ ನಮೂದಿಸಿಲ್ಲ. ಅನೇಕ ವರ್ತಕರು ಟ್ಯಾಕ್ಸ್ ವಸೂಲು ಮಾಡಿ ಹಣ ಕಟ್ಟಿದ್ದಾರೆ. ವರ್ತಕರು ಖರೀದಿ ಮಾಡಿದ ಪದಾರ್ಥಗಳ ಮೇಲೆ ಪರ್ಚೇಜ್ ಟ್ಯಾಕ್ಸ್ ಕೊಡಬೇಕೆಂದು ಈ ಕಾನೂನಿನ ಅಭಿಪ್ರಾಯವಾಗಿದೆ. ಈ ಕಾನೂನಿನ್ನ ಪ್ರಕಾರ 3ನೇ ಮತ್ತು 4ನೇ ಷೆಡ್ಯೂಲಿನಲ್ಲಿ ನಮೂದಿಸಿದ ಕೆಲವು ಪದಾರ್ಥಗಳ ಮೇಕೆ ಟ್ಯಾಕ್ಸ್ ಬೀಳುವ ಸಂಭವವಿದೆ. ಮೂಲ ಮಸೂದೆಯಲ್ಲಿ ಕೆಲವು ಲೋಪದೋಷಗಳು ಕಂಡು ಬಂದಿರುವುದರಿಂದ ಈ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಈ ಮಸೂದೆಯನ್ನು ತರಲಾಗಿದೆ ಎಂದು ನನ್ನ ಭಾವನೆ. ಪದಾರ್ಥಗಳು ಬೆಳೆಯುವ ಸ್ಥಳದಲ್ಲಿ ಪರ್ಚೇಜು ಟ್ಯಾಕ್ಸ ಹಾಕಿದರೆ ಸರಕಾರಕ್ಕೆ ಏನು ಲುಕ್ಸಾನವಾಗದೆ ಹಣ ವಸೂಲು ಆಗುತ್ತದೆ. ಆ ರೀತಿ ಮಾಡಿದರೆ ಈ ಮಸೂದೆಯನ್ನು ತರಬೇಕಾದ ಅವಶ್ಯಕತೆಯಿರಲಿಲ್ಲ. ಹೊಸ ರಾಜ್ಯ ರಚನೆಯಾಗುವ ಮೊದಲು ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಾಗಿ ಈ ಕಾನೂನು ಇದ್ದಿತ್ತು. ಈಗ ಈ ಮಸೂದೆಯ ಮೂಲಕ ಹಿಂದಿನ ವ್ಯವಹಾರಕ್ಕೆ ಅನ್ವಯಿಸುವ ಹಾಗೆ retrospective effect ಕೊಡುವುದಾದರೆ ಈ ಪರ್ಚೇಜೆ ಟ್ಯಾಕ್ಸಿನಿಂದ ಇಡೀ ವರ್ತಕ ವೃಂದಕ್ಕೆ ಭಾರೀ ಪೆಟ್ಟು ಬೀಳುತ್ತದೆ. ಇದರಿಂದ ಇಡೀ ದೇಶದ ವರ್ತಕ ವೃಂದಕ್ಕೆ ಕಳವಳವುಂಟಾಗುತ್ತದೆಂದು ನನ್ನ ಭಾವನೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಸೂಚಿಸಿರುವ ಹಾಗೆ, ವರ್ತಕ ವೃಂದದ ಮೇಲೆ ಆಘಾತವಾಗದ ಹಾಗೆ ಈ ತಿದ್ದುಪಡಿ ಮಸೂದೆಯನ್ನು ಕೂಲಂಕುಷವಾಗಿ ಚರ್ಚಿಸಿ ಇದರಲ್ಲಿ ಸೂಕ್ತ ತಿದ್ದುಪಡಿ ಮಾಡುವುದು ಉತ್ತಮ ಎಂದು ನನ್ನ ಭಾವನೆ. ಆದುದರಿಂದ ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೋಸ್ಕರ ಈ ಮಸೂದೆಯನ್ನು ಸೆಲೆಕ್ಟ ಕಮಿಟಿಗೆ ಕಳುಹಿಸಿಕೊಡುವುದು ಒಳ್ಳೆಯದು ಎಂದು ನನ್ನ ಭಾವನೆ ಮತ್ತು ಆ ರೀತಿ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ).—ಅಧ್ಯಕ್ಷರೇ, ಈ ಮಾರಾಟ ತೆರಿಗೆಯ ತಿದ್ದುಪಡಿಯನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ ಈ ವಿಧೇಯಕದಲ್ಲಿ ''ಪರ್ಚೇಜ್'' ಎನ್ನುವ ಒಂದು ಪದ ಸೇರಿಸಿರುವುದರಿಂದ ಇಷ್ಟು ಕರಪ್ಷ್ಯೂಷನ್ ಆಗಿರಬಹುದೆಂದು ನನಗೆ ಅರ್ಥವಾಗುತ್ತದೆ. ಸ್ವಾಮಿ, ಈಗ ಪರ್ಚೆಜ್ ಯಾರು ಮಾಡುತ್ತಾರೋ ಅವರು ಸೇಲ್ಸ್ ಮಾಡಲೇಬೇಕು. ಇಂದಲ್ಲ, ನಾಳೆ ಸೇಲ್ಸ್ ಮಾಡಲೇ ಬೇಕು. ಅದು ಲೆಕ್ಕಕ್ಕೆ ಬರಲೇ ಬೇಕು. ಯಾವಾಗ ಸೇಲ್ಸ್ ಮಾಡುತ್ತಾರೋ ಆಗ ಟ್ಯಾಕ್ಸ್ ಒಂದಲ್ಲ, ಒಂದು ರೂಪದಲ್ಲಿ ಬರಲೇ ಬೇಕು. ಈ ಸೇಲ್ಸ್ ಮತ್ತು ಪರ್ಚೇಜ್ ಎಂಬ ಎರಡು ಪದಗಳ ಜೊತೆಗೆ ಇಂತಹ ಒಂದು ತಿದ್ದುಪಡಿ ಮಸೂದೆ ಬಹಳವಾಗಿ ಬರುತ್ತದೆಂದು ನಾನಾದರೂ ಭಾವಿಸುತ್ತೇನೆ. ಏಕೆಂದರೆ ನನ್ನ ಸ್ನೇಹಿತರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಇಂತಹ ಮಸೂದೆಗಳನ್ನು ಸರ್ಕಾರದವರು ಬಹಳ ಆತುರಾತುರವಾಗಿ ಈ ಸಭೆಯಲ್ಲಿ ತಂದು ಪಾಸ್ ಮಾಡುತ್ತಿದ್ದಾರೆಂಬುದಾಗಿ ಹೇಳಿದರು. ನಿಜವಾಗಿಯೂ ಸರ್ಕಾರದವರು ಇಂತಹ ಮಸೂದೆಗಳನ್ನು ಆತುರಾತುರವಾಗಿ ತಂದಿದ್ದಾರೆಂಬುದನ್ನು ನಾನು ಒಪ್ಪುತ್ತೇನೆ. ಕೋರ್ಟ್ ಆರ್ಡರ್ ಮಾಡಿದ್ದಾದ ಮೇಲೆ ಸರ್ಕಾರ ಕಣ್ಣು ಬಿಡುತ್ತದೆ; ಅಂದ ಮೇಲೆ ಅದರಿಂದ ಚೆನ್ನಾಗಿ ಅರ್ಥವಾಗುತ್ತದೆ.

ದುಡ್ಡು ಸರ್ಕಾರಕ್ಕೆ ಬರುವುದಾದರೆ ಏನು ತಪ್ಪನ್ನಾದರೂ ಸರ್ಕಾರ ತೋರಿಸಿಕೊಡುತ್ತದೆ. ಇದರಲ್ಲಿ ಏನೇನು ಲೋಪ ದೋಷಗಳಿವೆ ಎಂಬುದನ್ನು ಮೊದಲೇ ನೋಡಿದ್ದರೆ ಬಹಳ ಚೆನ್ನಾಗಿತ್ತು. ಇಂತಹ ಟೀಕೆಗಳಿಗೆ ಅವಕಾಶವಾಗುತ್ತಿರಲಿಲ್ಲ. ಇದರಲ್ಲಿ ಪದಗಳನ್ನೇನೇನು ಉಪಯೋಗಿಸಿದ್ದಾರೆಂಬುದನ್ನು ನೋಡಿದರೆ, ಇದು ಒಂದೇ ಅಲ್ಲ. ಇನ್ನೂ ಹತ್ತಾರು ತಿದ್ದುಪಡಿಗಳು ಬರುವ ಸ್ಥಿತಿಯಿದೆ. ನಾನು ವರ್ತಕನಾಗಿರುವುದರಿಂದ ಇದರಲ್ಲಿ ಇನ್ನೂ ಸ್ವಲ್ಪ ತಿದ್ದುಪಡಿಗಳು ಅವಶ್ಯಕವಾಗಿ ಮಾಡುವುದು ಇದೆಯೆಂದು ನಾನು ಭಾವಿಸುತ್ತೇನೆ. ಈಗ ಒಂದುವರೆ ಕೋಟಿ ರೂಪಾಯಿಗಳನ್ನು ಜನಗಳು ಯಾವ ರೀತಿಯಾದರೂ ಉಳಿಸಿಕೊಳ್ಳುವುದಕ್ಕೆ ರಕ್ಷಣೆ ತೆಗೆದುಕೊಳ್ಳಲು ಪ್ರಯತ್ನ ಪಟ್ಟರೆ, ಸರ್ಕಾರ ಅವರ ಮೇಲೆ ತೆರಿಗೆ ಹೊರೆ ಹಾಕುವುದಕ್ಕೆ ಈಗಿನ ತೆರಿಗೆಗಿಂತ ಹತ್ತರಷ್ಟು ಹಾಕುವುದು ಚೆನ್ನಾಗಿಲ್ಲ. ಅವರಿಗೆ ಅಂತಹ ತೆರಿಗೆಯನ್ನು ಕೊಡಲು ಬಹಳ ಕಷ್ಟವಾಗುತ್ತದೆ. ವರ್ತಕರು ಯಾವ ರೀತಿ ಇಂತಹ ಸಂಧರ್ಭದಲ್ಲಿ ರಕ್ಷಣೆ ತೆಗೆದು ಕೊಳ್ಳಬೇಕೆಂಬುದನ್ನು ಸರ್ಕಾರದವರು ವಿಚಾರಮಾಡಿ ನೋಡಬೇಕು. ಇನ್ನೊಂದು ವಿಷಯ ಬಹುಶಃ ಕೋರ್ಟಿನ ಅಧಿಕಾರ ಈ ಸರ್ಕಾರಕ್ಕೇನಾದರೂ ಇದ್ದಿದ್ದರೆ ಕೋರ್ಟಿನ ಮೇಲೆಯೂ ಇವರು ಹೆಚ್ಚಿನ ಅಧಿಕಾರ ಚಲಾಯಿಸುತ್ತಿದ್ದರೋ ಏನೋ ಎಂದು ನನಗನ್ನಿಸುತ್ತದೆ. ಆದರೆ ಕೋರ್ಟಿನ ಕಾನೂನುಗಳು ಸ್ವಲ್ಪ ಬೇರೆಯಾಗಿರುವುದರಿಂದ ಬಹುಶಃ ಜನಗಳು ಈ ದೇಶದಲ್ಲಿ ಕೆಲವು ಕಾಲ ಉಳಿಯುವುದಕ್ಕೆ ಅವಕಾಶವಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಇನ್ನು ವರ್ತಕರ ವಿಷಯದಲ್ಲಿ ಹೇಳುವುದಾದರೆ ಅವರು ಐದು ವರ್ಷಗಳಾದ ಮೇಲೂ ಕೂಡ ಲೆಕ್ಕಗಳನ್ನು ತೋರಿಸುವುದಕ್ಕೆ ಅವಕಾಶವಿದೆಯೆಂದು ನಾನು ಹೇಳುತ್ತೇನೆ. ನಿನ್ನೆ ಊಟಮಾಡಿದ್ದನ್ನು ಇವೊತ್ತು ಹೇಳುವುದಕ್ಕಾಗುವುದಿಲ್ಲ. ಅಂದ ಮೇಲೆ ಅವರು ಐದು ವರ್ಷಗಳ ಹಿಂದಿನ ಲೆಕ್ಕವನ್ನು ಕೊಡಬೇಕಾದರೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ವರ್ಷ ವರ್ಷಕ್ಕೆ ಏನೇನಾಗಿದೆ ಎಂಬುದೇ ಸರಿಯಾಗಿ ಅವರಿಗೆ ಅರ್ಥವಾಗದೇ ಇರುವ ಕಾಲದಲ್ಲಿ ಆ ಲೆಕ್ಕವನ್ನೆಲ್ಲಾ ಈಗ ಒಪ್ಪಿಸಬೇಕು ಎಂದರೆ ಬಹಳ ಕಷ್ಟವಾಗುತ್ತದೆ ಎಂಬುದಾಗಿ ನನ್ನ ಮಾನ್ಯ ಸ್ನೇಹಿತರು ಅನೇಕರು ಬಹಳ ಚೆನ್ನಾಗಿ ಹೇಳಿದ್ದಾರೆ. ಇದನ್ನು ಸೆಲೆಕ್ಟ್ ಕಮಿಟಿಗೇ ಒಪ್ಪಿಸಬೇಕೆಂದು ಹೇಳಿದ್ದಾರೆ. ಅದರಂತೆ ನಾನೂ ಕೂಡ ಒಪ್ಪಿಕೊಳ್ಳುವುದಕ್ಕೆ ಇಷ್ಟಪಟ್ಟಿದ್ದೇನೆ. ಆದ್ದರಿಂದ ದಯವಿಟ್ಟು ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಎಲ್ಲಾ ವಿಷಯಗಳೂ ಚೆನ್ನಾಗಿ ಪರಿಶೀಲನೆಯಾಗಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು 1).—ಅಧ್ಯಕ್ಷರೇ, ಈ ದಿನ ಮಾರಾಟ ತೆರಿಗೆಯ ಮಸೂದೆ ಮೇಲಿನ ಚರ್ಚೆ ಈ ಸಭೆಯ ಮುಂದೆ ಇದೆ. ಇದನ್ನು ಕೂಲಂಕಷವಾಗಿ ಆಲೋಚನೆ ಮಾಡುವುದು ಅಗತ್ಯವಿದೆ. ಏಕೆಂದರೆ ವ್ಯಾಪಾರಸ್ಥರಲ್ಲಿ ಪ್ರತಿಯೊಬ್ಬರೂ ಈ ಆಕ್ಟನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಬೇಕು. ಆದರೆ ಒಂದುವರೆ ಕೋಟಿ ರೂಪಾಯಿಗಳನ್ನು ವಸೂಲುಮಾಡಿ ಬಿಟ್ಟು ಕೊಡುವುದಕ್ಕೆ ವ್ಯಾಪಾರಸ್ಥರಿಗೆ ಈ ಆಕ್ಟಿನ ವಿಷಯವಾಗಿ ತುಂಬಾ ಅರಿವಾಗಲಲ್ಲ. ವ್ಯಾಪಾರಸ್ಥರಿಗೆ ಅರಿವು ಆಗುವ ರೀತಿಯಲ್ಲಿ ಮಾರಾಟ ತೆರಿಗೆಯ ಇಲಾಖೆಯವರು ಹೇಳಿಕೆ ಕೊಟ್ಟಿಲ್ಲ. ಅವರಿಂದ ಒಂದು ತಪ್ಪು ಕಲ್ಪನೆಯಿಂದ ಹಣವನ್ನು ವಸೂಲು ಮಾಡಿದ್ದಾರೆ ಮತ್ತು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ರೀತಿಯಾಗಿ ಈಗಾಗಲೇ ಎಷ್ಟೋ ಮಂದಿ ಹಣ ಕೊಟ್ಟಿದ್ದಾರೆ. ಎಷ್ಟೋ ಮಂದಿಗೆ ಈ ಆಕ್ಟಿನ ಅರಿವು ಇದ್ದಿದ್ದರೂ ಅವರಿಂದ ಈ ಪರ್ಚೇಜ್ ಟ್ಯಾಕ್ಸನ್ನು ವಸೂಲು ಮಾಡಲಿಲ್ಲ. ಈಗ ರಿಟ್ರಾಸ್ಪೆಕ್ಟಿವ್ ಎಫೆಕ್ಟಿನಿಂದ ಎಷ್ಟೋ ಕೋಟಿ ರೂಪಾಯಿಗಳನ್ನು ವಸೂಲು ಮಾಡಬೇಕಾಗುತ್ತದೆ. ಈಗ ಈ ಪರ್ಚೇಜ್ ಟ್ಯಾಕ್ಸನ್ನು ಯಾವನು ವಸೂಲು ಮಾಡದೇ ಇದ್ದಾನೋ ಅಂತಹವನಿಗೆ ಐದು ವರ್ಷಗಳವರೆಗೆ ತಪ್ಪು ಶಿಕ್ಷೆಯನ್ನು ಈಗಿನ ತಿದ್ದುಪಡಿ ಆಕ್ಟನ್ನು ಪಾಸ್ ಮಾಡಿದರೆ ವಿಧಿಸಿದಂತಾಗುತ್ತದೆ. ಈಗ ಜನತೆಗೆ ಒಂದುವರೆ ಕೋಟಿ ರೂಪಾಯಿಗಳನ್ನು ಹಿಂದಕ್ಕೆ ಕೊಡುವ ಪ್ರಶ್ನೆಯಲ್ಲ. ಎಷ್ಟೋ ಕೋಟಿ ರೂಪಾಯಿಗಳನ್ನು ವ್ಯಾಪಾರಸ್ಥರಿಂದ ಈ ತೆರಿಗೆಗಳ ರೂಪವಾಗಿ ವಸೂಲು ಮಾಡುವ ಪರಿಸ್ಥಿತಿ ಇದೆ. ಇದರಿಂದ ಎಷ್ಟೋ ಮಂದಿಗೆ ಕಷ್ಟವನ್ನು ತಂದೊಡ್ಡಿದಂತಾಗುತ್ತದೆ. ಆದ್ದರಿಂದ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ಮಾರಾಟ ತೆರಿಗೆಯನ್ನು ಹಾಕಿದ್ದು ಸರಿಯೆಂದು ಖಂಡಿತವಾಗಿ ಯಾವ ಆಫೀಸರೂ ಸಹ ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯ ವಾಗುವುದಿಲ್ಲ. ಈ ರೀತಿ ಮಾಡಿದ್ದು ತಪ್ಪು ಎಂದು ಹೇಳುತ್ತಾರೆಯೇ ವಿನಾ ಈ ರೀತಿ ಮಾಡಿದರೆ ಸರಿ ಎಂದು ಹೇಳುವವರು ಯಾರೂ ಇಲ್ಲ. ಈ ಮಾರಾಟ ತೆರಿಗೆಯನ್ನು ಪರಿಶೀಲನೆ ಮಾಡಬೇಕಾದರೆ ಎರಡು ವರ್ಷಗಳೋ ಅಥವಾ ಮೂರು ವರ್ಷಗಳೋ ಬೇಕಾಗುತ್ತವೆ. ಅಂತಹ ಪರಿಸ್ಥಿತಿಯಲ್ಲಿ ವ್ಯಾಪಾರಸ್ಥರಿಗೆ ಅನೇಕ ಕಷ್ಟಗಳು ಒದಗತಕ್ಕ ಪ್ರಸಂಗ ಬರುತ್ತದೆ. ಹೀಗಿರುವಾಗ ಇಡೀ ಸೇಲ್ಸ್ ಟ್ಯಾಕ್ಸ್ ಆಕ್ಟನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಬಗ್ಗೆ ಏಕ ಮುಖವಾದ ತೆರಿಗೆಯನ್ನು ವಿಧಿಸುವಂತೆ ಮಾಡುವುದು ಅಗತ್ಯವಿದೆ. ಇದರ ಪರಿಶೀಲನೆ ಮಾಡುವುದು ಸರ್ಕಾರಕ್ಕೆ ಅತ್ಯಗತ್ಯವಿದೆ. ದ್ವಿಮುಖವಾಗಿ ತೆರಿಗೆ ಹಾಕುತ್ತಿರುವುದರಿಂದ ವ್ಯಾಪಾರಸ್ಥರಿಗೆ ತುಂಬಾ ಕಷ್ಟ ಒದಗುತ್ತದೆ. ವ್ಯಾಪಾರಸ್ಥರಿಗೆ ಕೊಡುವುದಕ್ಕೆ ಆಗದೆ ಇರುವ ತೆರಿಗೆಯನ್ನು ವಿಧಿಸಿ ವಸೂಲು ಮಾಡುವುದಕ್ಕೆ ಎಂದಿಗೂ ಪ್ರಯತ್ನ ಮಾಡಬೇಡಿ.

ಈ ಇಲಾಖೆಯ ಆಫೀಸರ ಕೆಲಸಗಳನ್ನು ಸಹ ಸ್ವಲ್ಪ ಮಟ್ಟಿಗೆ ಕಡಮೆ ಮಾಡಬೇಕು. ಈಗ ಒಂದು ಕಾಂಪ್ರಹೆನ್ಸಿವ್ ಸೇಲ್ಸ್‌ಟ್ಯಾಕ್ಸ್ ಆಕ್ಟನ್ನು ಮಾಡುವುದರಿಂದ ಖಂಡಿತವಾಗಿ ವ್ಯಾಪಾರಸ್ಥರಿಗೆ ಯೋಗ್ಯ ಪರಿಸ್ಥಿತಿಯನ್ನು ಒದಗಿಸಿ ಕೊಟ್ಟಂತಾಗುತ್ತದೆಂದು ನನ್ನ ಅಭಿಪ್ರಾಯ. ಹೀಗಿರುವಾಗ ಈ ತಿದ್ದುಪಡಿಯ ಮೇಲೆ ನನ್ನ ಅನೇಕ ಮಾನ್ಯ ಮಿತ್ರರು ವಿರೋಧವಾಗಿಯೂ ಪರವಾಗಿಯೂ ಮಾತನಾಡಿದ್ದಾರೆ. ಅವರ ಸಲಹೆಗಳನ್ನೆಲ್ಲಾ ಪರಿಶೀಲಿಸಬೇಕು. ಇನ್ನು ಇಲ್ಲಿ ಯಾವ ತರಹ ಭಾಷಣವನ್ನು ವ್ಯಥಾಮಾಡದೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕು. ಅಲ್ಲಿ ಈ ಬಗ್ಗೆ ದೀರ್ಘವಾಗಿ ಪರಿಶೀಲನೆ ನಡೆಸಿ ಯಾರಿಗೂ ಇದರಿಂದ ಕೆಡಕು ಆಗದಂತೆ ಕಾಯಿದೆಗಳನ್ನು ರಚಿಸಿ ಅದರಲ್ಲೂ ಮುಖ್ಯವಾಗಿ ವರ್ತಕ ವೃಂದದವರಿಗೆ ಯಾವ ವಿಧದಲ್ಲೂ ತೊಂದರೆ ಉಂಟಾಗದಂತೆ ಈ ತಿದ್ದುಪಡಿಯನ್ನು ಜಾರಿಗೆ ತರಬೇಕು. ಮುಖ್ಯವಾಗಿ ಸರ್ಕಾರದವರು ಆಕ್ಟಿನಲ್ಲಿ

(ಶ್ರೀ ಎಂ. ಶ್ರೀನಿವಾಸ ನಾಯಕ್)

ಹೇಳಿರುವದದಕ್ಕಿಂತ ಹೆಚ್ಚಿಗೆ ಈ ತೆರಿಗೆಯನ್ನು ವಸೂಲು ಮಾಡದೇ ಇರುವ ಹಾಗೆ ನೋಡಿಕೊಳ್ಳುವುದು ಅವರ ಮುಖ್ಯ ಕರ್ತವ್ಯವಾಗಿದೆ. ಇದನ್ನು ಖಂಡಿತವಾಗಿ ಸೆಲೆಕ್ಟ್ ಕಮಿಟಿಗೆ ಕಳುಹಿಸಲೇ ಬೇಕು. ಈಗ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವ ಅಭಿಪ್ರಾಯವನ್ನು ನಾನು ಪುಷ್ಟೀ ಕರಿಸಿ ಮಾತನಾಡುತ್ತಿದ್ದೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಈ ಮಾರಾಟ ತೆರಿಗೆಯ ತಿದ್ದುಪಡಿ ಮಸೂದೆಯನ್ನು ಈಗ ಈ ಸಭೆಯಲ್ಲಿ ತಂದಿರುವ ಕಾರಣವಿಷ್ಟೇ: ಸರ್ಕಾರದ ಬಗೆಗೆ ಅವಿಶ್ವಾಸ ಉಂಟಾಗುತ್ತದೆಂಬ ಸಂದರ್ಭ ಬಂದಾಗ ಈ ಅಧಿವೇಶನವನ್ನು ಕರೆದು ಜಾಗ್ರತೆ ಇಂತಹ ಮಸೂದೆಗಳನ್ನು ಪಾಸ್ ಮಾಡಿ ಜನರಿಗೆ ತೆರಿಗೆಗಳ ಮೂಲಕ ಇಲ್ಲದ ಸಲ್ಲದ ತೊಂದರೆಗಳನ್ನು ಕೊಡುವುದು ಇದರ ಉದ್ದೇಶ್ಯವಾಗಿದೆ. ಈ ರೀತಿ ಆತುರಾತುರವಾಗಿ ಇಂತಹ ಮಸೂದೆಗಳನ್ನು ಪಾಸ್‌ಮಾಡಿರುವುದರಿಂದಲೇ ಸರ್ಕಾರಕ್ಕೆ ಈಗ 1½ ಕೋಟಿ ರೂಪಾಯಿಗಳು ಲುಕ್ಸಾನು ಆಗುವಂತೆ ಮಾಡಿದ್ದಾರೆ. ಇದಕ್ಕೆಲ್ಲಾ ಅಧಿಕಾರ ಪಕ್ಷದಲ್ಲಿದ್ದಂಥ ಆಗಿನ ಹಣಕಾಸಿನ ಮಂತ್ರಿಗಳು ಮತ್ತು ಆಗಿನ ಅಧಿಕಾರಿಗಳೇ ಜವಾಬ್ದಾರರು ಎಂಬುದಾಗಿ ನಾನು ಧೈರ್ಯವಾಗಿ ಹೇಳಬೇಕಾಗಿದೆ. ನನಗೆ ಚೆನ್ನಾಗಿ ಜ್ಞಾಪಕವಿದೆ. ಈ ಸೇಲ್ಸ್‌ಟ್ಯಾಕ್ಸ್ ವಸೂಲಿಗೆ ಬರುತ್ತಿದ್ದ ಅಧಿಕಾರಿಗಳು ಹೇಳುವುದೇ ಒಂದು ತರಹ, ಡೆಪ್ಯುಟಿ ಕಮಿಷನರು ಹೇಳುವುದೇ ಒಂದು ರೀತಿ, ಇನ್ನು ಕಮಿಷನರ್ ಹೇಳುವುದೇ ಒಂದು ರೀತಿ. ಹೀಗೆ 3 ವಿಧವಾಗಿ ವರ್ತಕರಿಗೆ ಹೇಳುತ್ತಿದ್ದಾರೆ. ಇದರ ಜೊತೆಗೆ ಆಗಿನ ಆರ್ಥಿಕ ಮಂತ್ರಿಗಳು ಬೇರೆ ವರ್ತಕರಿಗೆ ಈ ಬಗ್ಗೆ ತಿಳುವಳಿಕೆ ಕೊಡುತ್ತಾ ಹೆಚ್ಚಿಗೆ ವರ್ತಕರಿಂದ ಈ ಮಾರಾಟ ತೆರಿಗೆಯನ್ನು ವಸೂಲು ಮಾಡುವುದಕ್ಕೋಸ್ಕರ ಟೂರ್‌ಗಳನ್ನು ಹಾಕಿಕೊಂಡಿದ್ದು ಬೇರೆ. ಆ ಟೂರಿಗಾಗಿ 3½ ಅಥವಾ 3¾ ಸಾವಿರ ರೂಪಾಯಿಗಳು ಖರ್ಚಾಗಿವೆ. ಅವರು ಆ ಟೂರ್ ಸಂಧರ್ಭದಲ್ಲಿ ಬಾಳೆ ಹಣ್ಣು, ಬಿಸ್ಕತ್ತು ತಿಂದುಕೊಂಡು ಅವರು ಹೇಳುವುದು ವರ್ತಕರಿಗೆ ಗೊತ್ತಾಗದೆ ವರ್ತಕರು ಹೇಳುವುದು ಮಂತ್ರಿಗಳಿಗೆ ಗೊತ್ತಾಗದೆ ಈ ಮಾರಾಟ ತೆರಿಗೆಯನ್ನು ಯಾರಿಗೆ ಕೊಡಬೇಕು, ಯಾರಿಂದ ವಸೂಲು ಮಾಡಬೇಕು ಎಂಬುದು ಎಷ್ಟೋ ಕಡೆಗಳಲ್ಲಿ ಮಂತ್ರಿಗಳಿಗೂ ಕೂಡ ವಿವರಿಸಲಿಕ್ಕೆ ಸಾಧ್ಯವಾಗಲಿಲ್ಲ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳು ಈ ತೆರಿಗೆಯನ್ನು ವಸೂಲುಮಾಡಿ ಸರ್ಕಾರಕ್ಕೆ ಕೊಡದೇ ಇರುವ ಪ್ರಸಂಗಗಳೂ ಉಂಟು. ಮತ್ತೆ ಕೆಲವರು ತಮ್ಮ ಕೈಯಿಂದಲೇ ಕೊಟ್ಟಿರುವ ಸಂದರ್ಭವೂ ಉಂಟು. ಹಣ ವಸೂಲು ಮಾಡಬೇಕೆಂದು ಒಂದು ಕಾನೂನನ್ನು ತಂದು ನಿಜವಾಗಿ ಅದನ್ನು ವಸೂಲು ಮಾಡಿದ್ದಾರೆಯೇ ಅಥವಾ ಇಲ್ಲವೇ, ಅಥವಾ ಯಾರಿಂದ ವಸೂಲು ಮಾಡಬೇಕು, ಯಾರಿಂದ ವಸೂಲು ಮಾಡಬಾರದು, ಅದು ನ್ಯಾಯವೇ ಎಂಬುದನ್ನು ಮನಗಾಣಬೇಕು. ಆ ತೆರಿಗೆಯನ್ನು ಈ ತರಹ ಅಲ್ಲಿ ವಸೂಲು ಮಾಡುವುದು ಅನ್ಯಾಯವೆಂಬುದಾಗಿ ತಿಳಿದಿದ್ದರೂ ಈಗ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಆಗಿ ಕೊಡುವುದು ತುಂಬಾ ಅನ್ಯಾಯ. ಆದ್ದರಿಂದ ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಜಾರಿಗೆ ತರುವುದು ಉತ್ತಮ. ಇನ್ನು ಮುಂದಾದರೂ ಕಾನೂನಾಗಲೀ ಅಥವಾ ಕಾಯಿದೆಯಾಗಲೀ ರಚನೆಮಾಡುವಾಗ ನಿಧಾನವಾಗಿ ಯೋಚಿಸಿ, ಕೂಲಂಕಷವಾಗಿ ವಿಚಾರಮಾಡಿ ವಿಮರ್ಶೆಮಾಡಿ ಜನಗಳ ಮೇಲೆ ಅದರ ಪರಿಣಾಮ ವೇನಾಗುತ್ತದೆಂಬುದನ್ನೆಲ್ಲಾ ಚರ್ಚಿಸಬೇಕು. ನ್ಯಾಯವಾದ ಕಾಯಿದೆಗಳನ್ನು ಉತ್ತಮ ಮಟ್ಟದಲ್ಲಿ ರಚನೆಮಾಡಿದರೆ ಈ ಸರ್ಕಾರಕ್ಕೂ ಈ ಸಭೆಗೂ ನಿಜವಾಗಿ ಒಂದು ಗೌರವ ಬರುತ್ತದೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗಂಗಾಧರ ನಾಮೋಶಿ (ಗುಲ್ಬರ್ಗ).—ನಮ್ಮ ಮಾನ್ಯ ಸ್ನೇಹಿತರು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಈಗಾಗಲೇ ಹೇಳಿದ್ದಾರೆ. ನಾನು ಒಂದು ಅಂಶವನ್ನು ಮಾತ್ರ ಅಧ್ಯಕ್ಷರ ಮುಖಾಂತರ ಮುಖ್ಯ ಮಂತ್ರಿಗಳಲ್ಲಿ ಹೇಳ ಬಯಸುತ್ತೇನೆ. ಕೆಲವೇ ದಿವಸಗಳ ಕೆಳಗೆ ಅವರು ಗುಲ್ಬರ್ಗಕ್ಕೆ ಬಂದಾಗ ಅಲ್ಲಿರತಕ್ಕ ವ್ಯಾಪಾರಸ್ಥರು ತಮ್ಮ ವ್ಯಾಪಾರ ಹೇಗಾಗುತ್ತದೆ ಎಂಬುದನ್ನು ಹೇಳಿದರು. ಅದನ್ನು ಅವರು ಜ್ಞಾಪಕಕ್ಕೆ ಗೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯ. ನಮ್ಮ ಸಂಸ್ಥಾನದ ಪಕ್ಕದಲ್ಲಿರತಕ್ಕ ಬಾರ್ಡರ್ ಸ್ಟೇಟ ಗಳಲ್ಲಿ ಟ್ಯಾಕ್ಸ್ ಇಲ್ಲದೇ ಇರುವ ಕಾರಣ ನಮ್ಮಲ್ಲಿರತಕ್ಕ ಕಾಳು ಕಡಿ ಎಲ್ಲಾ ಬೊಂಬಾಯಿ ಸ್ಟೇಟ್‌ಗೆ ಹೋಗುತ್ತಿದೆ. ಹೀಗಿರುವಾಗ 5 ವರ್ಷಗಳಿಂದ ಅವುಗಳ ಮೇಲೆ ಬೀಳ ಬಹುದಾಗಿರತಕ್ಕ ಟ್ಯಾಕ್ಸ್ ಈಗ ಕೊಡಿ ಎಂದರೆ ಯಾರೂ ಕೂಡ ಇನ್ನು ಮುಂದೆ ವ್ಯಾಪಾರ ಮಾಡಲಿಕ್ಕೆ ಬರುವುದಿಲ್ಲ. ಬೊಂಬಾಯಿ, ಹೈದರಾಬಾದು ಕರ್ನಾಟಕದಲ್ಲಿ ಮೊದಲು ಮಹಾರಾಷ್ಟ್ರದಿಂದ ಕಾಳು ಬಂದು ಮಾರಾಟವಾಗುತ್ತಿತ್ತು. ಈಗ ಇಲ್ಲಿಯವರು ಹೋಗಿ ಮಹಾರಾಷ್ಟ್ರದಲ್ಲಿ ಮಾರುತ್ತಿದ್ದಾರೆ. ವ್ಯಾಪಾರಸ್ಥರಲ್ಲಿ ಇಂಥಾ ಒಂದು ಪರಿಸ್ಥಿತಿ ಉಂಟಾಗಿದೆ. ವ್ಯಾಪಾರಸ್ಥರಲ್ಲಿ ಕಮೀಷನ್ ವ್ಯಾಪಾರ ಬೇರೆ ಇರುತ್ತದೆ. ಕಮೀಷನ್‌ಗಾಗಿ ಹಣ ಕೊಟ್ಟಿರುತ್ತಾರೆ. ಅದನ್ನು ವಾಪಸು ಕೊಡಿ ಎಂದರೆ ಯಾರೂ ಹಿಂತಿರುಗಿ ಕೊಡುವುದಿಲ್ಲ. ಕೆಲವು ಸದಸ್ಯರು ವ್ಯಾಪಾರಸ್ಥರು ಅದನ್ನು ಕೂಡ ಮಾರಾಟ ಮಾಡುವಾಗ ವಸೂಲು ಮಾಡಿರುತ್ತಾರೆ. ಆದರೆ ಅದನ್ನು ಸರ್ಕಾರಕ್ಕೆ ಕೊಡುವುದಿಲ್ಲ ಎಂದು ಹೇಳಿದರು. ಅದು ಹಾಗೆ ಆಗುವುದಿಲ್ಲ. ವ್ಯಾಪಾರಸ್ಥರಲ್ಲಿ ವಿಶ್ವಾಸದಿಂದ ನಂಬಿಕೆಯಿಂದ ವ್ಯಾಪಾರ ನಡೆಯುತ್ತಿರುತ್ತದೆ. ಅವರು ತಮ್ಮ ವ್ಯಾಪಾರದ ಟರ್ನ್ ಓವರ್ ಮೇಲೆ ಇನ್‌ಕಂ ಟ್ಯಾಕ್ಸ್ ಬೇರೆ ಕೊಡಬೇಕು. ಈ ರೀತಿ ಒಂದು ಕಡೆ ಇನ್‌ಕಂ ಟ್ಯಾಕ್ಸ್ ಮತ್ತೊಂದು ಕಡೆ ಸೇಲ್ಸ್ ಟ್ಯಾಕ್ಸ್ ಈ ರೀತಿ ಏಕೆ ತೆಗೆದುಕೊಳ್ಳುತ್ತೀರಿ ? ಇಷ್ಟೆಲ್ಲಾ ತೊಂದರೆ ಕೊಟ್ಟರೆ ಸರ್ಕಾರದ ಮೇಲೆ ಮೊದಲೇ ವಿಶ್ವಾಸ ಕಡಮೆ ಆಗಿದೆ. ಮಹಾರಾಷ್ಟ್ರ ಸರ್ಕಾರದವರು ಸೇಲ್ಸ್‌ಟ್ಯಾಕ್ಸ್ ವಿಷಯದಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಅದೇ ಕ್ರಮ ಕರ್ನಾಟಕದವರು ತೆಗೆದುಕೊಂಡರೆ ನಿಮ್ಮಲ್ಲಿ ಸ್ವಲ್ಪ ವಿಶ್ವಾಸ ಉಳಿಯುತ್ತದೆ. ಇಲ್ಲದೆ ಇದ್ದರೆ ಅನೇಕರು ಅವರು ಕೊಡಬೇಕಾದ ಹಣಕ್ಕೆ ಮನೆ ಮಠ ಮಾರಿ ಅದನ್ನು ಕೊಡಬೇಕಾದ ಪರಿಸ್ಥಿತಿ ಬರುತ್ತದೆ. ಇದನ್ನೆಲ್ಲಾ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಬೇಕು. 1-1½ ಕೋಟಿ ರೂಪಾಯಿ ಹೆಚ್ಚಿನ ಹಣ ಆದರೂ ಚಿಂತೆ ಇಲ್ಲ 5 ವರ್ಷಕ್ಕೆ ಮುಂಚಿನಿಂದ ವಸೂಲು ಮಾಡಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

†ಶ್ರೀ ಗೋಪಾಲ ಸಾಲೆನ್ನ (ಮೂಡಬಿದರೆ).—ಮಾನ್ಯ ಅಧ್ಯಕ್ಷರೇ, ಈ ಸೇಲ್ಸ್‌ಟ್ಯಾಕ್ಸ್ ಎನ್ನು

ವುದು ದೊಡ್ಡ ಒಂದು confusion ಉಂಟು ಮಾಡಿದೆ, ಒಂದು ಕಡೆ ಸೆಂಟ್ರಲ್ ಸೇಲ್ಸ್‌ಟ್ಯಾಕ್ಸ್ ಎಂದು ಇದೆ. ಇನ್ನೊಂದು ಕಡೆ ಸ್ಟೇಟ್ ಸೇಲ್ಸ್‌ಟ್ಯಾಕ್ಸ್ ಎಂದು ಇದೆ. ಹೀಗೆ ಎರಡನ್ನು ಕೊಂಡು ಕೊಳ್ಳುವಾಗ ಮತ್ತು ಮಾರಾಟ ಮಾಡುವಾಗ ಕೊಡಬೇಕು. ವ್ಯಾಪಾರಸ್ಥರಿಗೆ ಇದು ಒಂದು ಬಹಳ ಕಷ್ಟ ಪರಿಸ್ಥಿತಿಯನ್ನು ಉಂಟು ಮಾಡಿದೆ. ವ್ಯಾಪಾರಸ್ಥರಿಂದ ವಸೂಲು ಮಾಡಿದರೂ ಅವರು ಜನರಿಂದಲೇ ವಸೂಲು ಮಾಡುವುದು. ಇದರ ಪರಿಣಾಮ ಎಲ್ಲಾ ಜನರ ಮೇಲೆ. ಇವೊತ್ತು ನಾನಾ ತರಹದ ತೆರಿಗೆಗಳಿಂದ ಜನರು ಅವರ ಜೀವನವನ್ನು ಸಾಗಿಸುವುದೇ ಕಷ್ಟವಾಗಿದೆ ಎಂಬುದನ್ನು ಸರ್ಕಾರ ಒಪ್ಪಬೇಕು ಮತ್ತು ಜನರು ಅದನ್ನು ಸಹಿಸಲಾರದೇ ಅವರ ಕೂಗು ಎಲ್ಲಾ ಕಡೆಯೂ ಕೇಳಿಸುತ್ತಾ ಇದೆ. ಈ ಸಭೆಯಲ್ಲಿ ಈ ತಿದ್ದುಪಡಿ ಇಂಥಾ ಪರಿಸ್ಥಿತಿಯಲ್ಲಿ ಬಂದಿರುವಾಗ ಇದನ್ನು ಪರ್ಯಾಲೋಚನೆ ಮಾಡಲೇಬೇಕಾಗುತ್ತದೆ. ಅದಕ್ಕೆ ಒಂದು ಅವಕಾಶ ಈಗ ದೊರಕಿದಂತಾಯಿತು ಎಂದು ನಾನು ಭಾವಿಸುತ್ತೇನೆ. ಆ ದೃಷ್ಟಿಯಿಂದ ಈ ಸೇಲ್ಸ್ ಟ್ಯಾಕ್ಸನ್ನು ಪೂರ್ತಿಯಾಗಿ ಏಕೆ ರದ್ದು ಮಾಡಬಾರದು ಎಂಬ ಪ್ರಶ್ನೆಯನ್ನು ಕೂಡ ಈ ಸಭೆ ಪರ್ಯಾಲೋಚನೆ ಮಾಡಬೇಕಾಗಿದೆ. ಇವೊತ್ತಿನ ದಿವಸ ದಿನನಿತ್ಯದ ಉಪಯೋಗದ ಸಾಮಾನುಗಳ ಮೇಲೆ ಬೀಳತಕ್ಕ ತೆರಿಗೆ ಕೊಂಚವಾದರೂ ಕಡಮೆಯಾಗಬೇಕು. ಹಾಗೆ ನಿವೃತ್ತಿ ಮಾಡುವ ಕಾಲಕ್ಕೆ ಸರ್ಕಾರದವರು ಕೆಲವು ವಿಚಾರಗಳಲ್ಲಿ ಖರ್ಚು ಕೂಡ ಕಡಮೆ ಮಾಡಲಿಕ್ಕೆ ಅವಕಾಶವಿದೆ. ಎಷ್ಟೋ ಕಮಿಷನ್‌ಗಳು, ಕೋರ್ಟುಗಳು ಇವೆ. ಅವನ್ನೆಲ್ಲಾ ನಿಲ್ಲಿಸಿ, ಈ ಸೇಲ್ಸ್‌ಟ್ಯಾಕ್ಸ್‌ನಲ್ಲಿ ರಿಯಾಯಿತಿ ಕೊಟ್ಟರೆ ದೇಶದಲ್ಲಿ ಜನರಿಗೆ ಸ್ವಲ್ಪ ತೆರಿಗೆಯ ಭಾರ ಕಡಮೆಯಾಗುತ್ತದೆ. ಅದೇನೂ ಅಷ್ಟು ಭಾರಿ ಪರಿಣಾಮಕಾರಿಯಾಗಿ ಆಗದೇ ಇದ್ದರೂ ಕೂಡ ಇನ್‌ಕಂ ಟ್ಯಾಕ್ಸ್‌ಮತ್ತು ಇತರ ಅನೇಕ ತೆರಿಗೆಗಳು ಇರುವಾಗ ಕಿಂಚಿತ್ತಾದರೂ ರಿಲೀಫ್ ಕೊಟ್ಟಂತಾಗುತ್ತದೆ. ಇದನ್ನು ಪರ್ಯಾಲೋಚನೆ ಮಾಡಬೇಕು. ಜನರಿಗೆ ಪರಿಣಾಮಕಾರಿಯಾದಂಥ ರಿಲೀಫ್ ಕೊಡತಕ್ಕಂಥ ಸಂದರ್ಭದಲ್ಲಿ ಅದಕ್ಕೆ ಸರಿಯಾದ ನೀತಿ, ಕಾನೂನು ಮಾಡಬೇಕೆ ಹೊರತು ಅದಕ್ಕೆ ವ್ಯತಿರಿಕ್ತವಾಗಿ ರಿಟ್ರಾಸ್ಪೆಕ್ಟೀವ್ ಇಫೆಕ್ಟ್‌ನಿಂದ ಜಾರಿಗೆ ತರಬೇಕೆಂದು ಹೇಳುವಂಥಾದ್ದು, ಅಂಥಾ ಒಂದು ಕಾಯಿದೆಯನ್ನು ಮಾಡುವಂಥಾದ್ದು ಪ್ರಜಾ ಪ್ರಭುತ್ವದಲ್ಲಿ ಜನರಿಗೆ ಘಟನಾತ್ಮಕವಾಗಿ ಕೊಟ್ಟಂಥಾ ಹಕ್ಕು ಬಾಧ್ಯತೆಗಳನ್ನು ನೀವೇ ಕಸಿದುಕೊಡಂತಾಗುತ್ತದೆ. ಇದು ಈ ಕಾಲದ ಪ್ರಜಾ ಪ್ರಭುತ್ವದ ರಾಜ್ಯದಲ್ಲಿ ಸರಿಯಲ್ಲ. ಇದು ಜನರಿಗೆ ನೀವು ಮಾಡುವಂತಹ ದ್ರೋಹ. ಆದ್ದರಿಂದ ಈ ವಿಚಾರದಲ್ಲಿ ಹೆಚ್ಚಿನ ಪರಿಶೀಲನೆ ಮಾಡುವುದು ಅಗತ್ಯವಿದೆ. ಅದಕ್ಕಾಗಿ ಈ ತಿದ್ದುಪಡಿ ಮಸೂದೆಯನ್ನ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕು. ಅವರು ಈ ಸಲಹೆಗಳನ್ನು ಗಮನಕ್ಕೆ ತೆಗೆದು ಕೊಂಡು ಒಂದು ತೀರ್ಮಾನಕ್ಕೆ ಬರಬೇಕೆಂದು ನನ್ನ ಅಭಿಪ್ರಾಯ

†Sri S. R. KANTHI.—Sir, I have heard the arguments advanced by the hon'ble Members. It appears to me that there is an overwhelming sense in the House that this Bill should be sent to a Select Committee. I accept this suggestion. I would have given a detailed reply to the points raised on the floor of this House but I do not think it necessary to do so now. Anyhow I would like to refer to one or two points raised here. Sri Venkatai Gowda said that the amendment to Section 7 was not in conformity with the Central Sales Tax Act. I do not think so. Section 15 of the CST Act only lays down that the State should not tax declared goods more than once and they can raise not more than 2 per cent. It has not prohibited the State from levying purchase tax.

About rule 6, the High Court has held that the Government has no power to amend rule 6 retrospectively. So we have come to this House to enable us to amend the rule retrospectively.

Sri V. S. Patil spoke about the legality and constitutionality of this Bill. We have examined the matter thoroughly and are satisfied about its legality.

Opinions and interpretations are bound to differ. Regading the laws passed there was no doubt in our minds; but the High Court has interpreted them differently. Under such circumstances, there is nothing wrong in amending the laws to bring the amendment in accordance with the intentions of the Legislature. I commend the Bill for the consideration by the House.

Mr. SPEAKER.—The question is:

"That the Mysore Sales Tax (Amendment) Bill, 1962 be taken into consideration."

The motion was adopted.

Motion to refer to a Select Committee.

Sri S. R. KANTHI.—I beg to move:

"That the Mysore Sales Tax (Amendment) Bill, 1962 be referred to a Select Committee consisting of the following Members:

Sriyuts.—

B. D. Jatti
Anna Rao Ganamukhi
K. P. Gadag
M. Rajasekharamurthy